**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/167/2020/ARE-14

Multi Storied Building,
Dr. B.R. Ambedkar Veedhi,
Bengaluru-560001
Date: 28th February, 2023.

## RECOMMENDATION

Sub: Departmental Inquiry against Smt. G.Lakshmi, the then Panchayath Development Officer, Huttur Grama Panchayath, Kolar Taluk and District-reg.

Ref: 1) Government Order No.ಗ್ರಾಅಪ/157/ಗ್ರಾಪಂಕಾ/2020, Bengaluru, dated: 10/09/2020.

2) Nomination Order No.UPLOK-2/DE/167/2020, Bengaluru, dated: 19/09/2020 of Upalokayukta, State of Karnataka, Bengaluru.

3) Inquiry Report dated: 23/02/2023 of Additional Registrar of Enquiries-14, Karnataka Lokayukta, Bengaluru.

*****

The Government by its order dated: 10/09/2020 initiated the disciplinary proceedings against Smt. G.Lakshmi, the then Panchayath Development Officer, Huttur Grama Panchayath, Kolar Taluk and District (hereinafter referred to as Delinquent

Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-2/DE/167/2020, Bengaluru, dated: 19/09/2020 nominated Additional Registrar of Enquiries-14, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by her.

3. The DGO, Smt. G.Lakshmi, the then Panchayath Development Officer, Huttur Grama Panchayath, Kolar Taluk and District was tried for the following charges:

**<u>ಅನುಬಂಧ–1</u>**

**<u>ದೋಷಾರೋಪಣೆ</u>**

ಆ.ಸ.ನೌ. ಶ್ರೀಮತಿ. ಜಿ.ಲಕ್ಷ್ಮಿ ಆದ ನೀವು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹುತ್ತೂರು ಗ್ರಾಮ ಪಂಚಾಯತ್, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, 13ನೇ ಹಣಕಾಸು ಯೋಜನೆಯಡಿ 2014–15ನೇ ಸಾಲಿನಲ್ಲಿ ಒಟ್ಟು ರೂ.12 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ.3 ಲಕ್ಷವನ್ನು ಶೇ.25 ಎಸ್.ಸಿ/ಎಸ್.ಟಿ ರವರಿಗೆ, ರೂ.36,000 ವನ್ನು ಶೇ.3 ಅಂಗವಿಕಲರಿಗೆ ಮತ್ತು ಇತರೆ ಕಾಮಗಾರಿಗಳಿಗೆ ರೂ.8,64,000/–ಗಳನ್ನು ಬಳಸಲು ಕ್ರಿಯಾ ಯೋಜನೆ ತಯಾರಿಸಿರುವುದು ದಿನಾಂಕ: 26/05/2014ರ ಪಂಚಾಯಿತಿ ನಡವಳಿಯಲ್ಲಿ ಕಂಡುಬಂದಿದೆ. ಸದರಿ ಕ್ರಿಯಾ ಯೋಜನೆಯನ್ನು, ಕೋಲಾರ ತಾಲ್ಲೂಕು ಪಂಚಾಯಿತಿ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದಿಸಿದ್ದಾರೆ. ಇರಬೇಕೆನ್ನುವುದು ಕಡ್ಡಾಯವಾಗಿದೆ. ಆದರೆ ಸದರಿ ಖರ್ಚುಗಳಿಗೆ ಸಂಬಂಧಿಸಿದ ವೋಚರ್‌ಗಳು ಲಭ್ಯವಿಲ್ಲ. ಸದರಿ ಚೆಕ್‌ಗಳನ್ನು ಆಯಾಯ ವ್ಯಕ್ತಿ / ಸಂಸ್ಥೆ ಹೆಸರಿಗೆ ನೀಡಿದ ಬಗ್ಗೆ ಸ್ವೀಕೃತಿಯನ್ನು ಪಡೆದ ಬಗ್ಗೆ ದಾಖಲೆಯಿಲ್ಲ. ಕಾರಣ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಜೆಟ್) ನಿಯಮಾವಳಿಗಳು, 2006ರ ನಿಯಮಗಳು ಮತ್ತು ಕರ್ನಾಟಕ ಆರ್ಥಿಕ ಸಂಹಿತತೆ ನಿಯಮಗಳು ಉಲ್ಲಂಘನೆಯಾಗಿರುತ್ತವೆ. ಮೇಲೆ ಹೇಳಿದ ಕಾರಣಗಳಿಂದಾಗಿ ರೂ.10,43,690/–ಗಳ ಖರ್ಚು ನಿಯಮಬಾಹಿರವಾಗಿದ್ದು, ಈ ದುರುಪಯೋಗದ ಮೊತ್ತಕ್ಕೆ ನೀವು ಸಂಪೂರ್ಣ ಜವಾಬ್ದಾರರಾಗಿರುತ್ತೀರಿ.

ಆದರ್ಕಾರಣ, ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1) ರ ಅಡಿಯಲ್ಲಿ ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has '**Partly Proved**' the charges leveled against DGO, Smt. G.Lakshmi, the then Panchayath Development Officer, Huttur Grama Panchayath, Kolar Taluk and District.

5. On perusal of the Inquiry Report, in order to prove the guilt of the DGO, the Disciplinary Authority has examined one witness i.e., PW-1 and Ex. P-1 to P-6 documents were got marked. DGO has examined herself as DW-1 and got marked Ex. D-1 to D-5 documents.

6. As per the First Oral Statement of DGO furnished by the Inquiry Officer, DGO, Smt. G.Lakshmi will retire from service on 30/04/2038.

7. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

8. Having regard to the nature of charge '**Partly Proved**' against DGO, Smt. G.Lakshmi, the then Panchayath Development Officer, Huttur Grama Panchayath, Kolar Taluk and District and on consideration of the totality of circumstances:-

> "It is hereby recommended to the Government to impose penalty of withholding three annual increments payable to DGO, Smt. G.Lakshmi, the then Panchayath Development Officer, Huttur Grama Panchayath, Kolar Taluk and District with cumulative effect and also recovering a sum of Rs.88,732/- with interest at the rate of 8% per annum from the year 2015 from her salary as per Rule 8(iv) of KCS (CCA) Rules, 1957".

9. Action taken in the matter shall be intimated to this Authority.

Connected records are enclosed herewith.

28/2/23

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ನಂ. ಉಪಲೋಕ್–2/ಡಿಇ/167/2020/ಎ.ಆರ್.ಇ–14

ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 23/02/2023.

## ವಿಚಾರಣಾ ವರದಿ

**ಉಪಸ್ಥಿತರು:** **ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರರಾದ **ಶ್ರೀಮತಿ ಜಿ. ಲಕ್ಷ್ಮೀ,** ಈ ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹುತ್ತೂರು ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1) ಕಂಪ್ಲೆಂಟ್/ಉಪಲೋಕ್/ಬಿಡಿ/3334/2017/ಉನಿವಿ–4 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 02–07–2019.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/157/ಗ್ರಾಪಂಕಾ/2020 ಬೆಂಗಳೂರು ದಿನಾಂಕ 10–09–2020
3) ನಾಮ ನಿರ್ದೇಶನ ಸಂಖ್ಯೆ: ಉಪಲೋಕ್–2/ಡಿಇ/167/2020, ಬೆಂಗಳೂರು ದಿನಾಂಕ: 19–09–2020.

* * * * * *

1) ದೂರುದಾರರಾದ **ಶ್ರೀ ವಿ. ರಾಮಕೃಷ್ಣಪ್ಪ, ಬಿನ್ ಲೇಟ್ ಆಂಜನೇಯಲು,** ಊದವಾರಪಲ್ಲಿ ಗ್ರಾಮ, ಪುಳಗಲ್ ಅಂಚೆ, ಚೇಳೂರು ಹೋಬಳಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ರವರು ಶ್ರೀಮತಿ ಜಿ. ಲಕ್ಷ್ಮೀ, ಪಂಚಯಿತಿ ಅಭಿವೃದ್ಧಿ ಅಧಿಕಾರಿ, ಹುತ್ತೂರು ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಇವರ ದೂರನ್ನು ವಿರುದ್ಧ ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಹುತ್ತೂರು ಗ್ರಾಮ ಪಂಚಾಯತ್‌ಗೆ

ಸಂಬಂಧಿಸಿದಂತೆ, 13ನೇ ಹಣಕಾಸು ಯೋಜನೆಯಡಿಯಲ್ಲಿ ದಿನಾಂಕ: 12/06/2014 ರಿಂದ 09/09/2015 ರವರೆಗೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ? ಅದರಲ್ಲಿ ಎಷ್ಟು ಹಣ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ? ಎಂಬ ಬಗ್ಗೆ ಕ್ರಿಯಾ ಯೋಜನೆ ಮತ್ತು ಬ್ಯಾಂಕ್ ಘಾರ್ ಶೀಟ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ಮಾಹಿತಿ ಹಕ್ಕು ಅಧಿನಿಯಮದಡಿ ಕೋರಿದ್ದು, ಎದುರುದಾರರು ಬ್ಯಾಂಕ್ ಘಾರ್ ಶೀಟ್ ಮಾತ್ರ ನೀಡಿದ್ದಾರೆ. ಅದನ್ನು ಪರಿಶೀಲಿಸಲಾಗಿ, ರೂ.13,23,131/- ಹಣ ಬಂದಿರುವುದು ಕಂಡು ಬಂದಿದೆ. ಆದರೆ, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ನೀಡದಿರುವುದರಿಂದ, ಮಾಹಿತಿ ಹಕ್ಕು ಮೇಲ್ಮನವಿ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ದಾಖಲೆಗಳನ್ನು ನೀಡುವಂತೆ ನಿರ್ದೇಶನ ನೀಡಿದ್ದರೂ ಸಹ ಯಾವುದೇ ದಾಖಲೆಗಳನ್ನು ನೀಡಿಲ್ಲ. ಸದರಿ ಗ್ರಾಮ ಪಂಚಾಯತ್‌ಗೆ ಮಂಜೂರಾದ ಹಣವನ್ನು ಎದುರುದಾರರು ಅಭಿವೃದ್ಧಿ ಕೆಲಸಗಳಿಗೆ ಬಳಸದೇ ದುರುಪಯೋಗ ಪಡಿಸಿಕೊಂಡಿರುವುದು ಕಂಡು ಬಂದಿದೆಯೆಂದು ಹೇಳಿದ್ದಾರೆ. ಆದ್ದರಿಂದ, ಇವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡಿರುತ್ತಾರೆ.

2) ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 10-09-2020 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 19-09-2020 ರಂದು ಅಪರ ನಿಬಂಧಕರು, ವಿಚಾರಣೆಗಳು-14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು ಇರುತ್ತದೆ

3) ನಾಮನಿರ್ದೇಶನದ ಆದೇಶದಂತೆ, **ಆ.ಸ.ನೌ ರವರ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು, ಅಪರ ನಿಬಂಧಕರು, ವಿಚಾರಣೆಗಳು-14 ರವರು ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು

ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 07-10-2020 ರಂದು ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ-1

4) ಆ.ಸ.ನೌ. ಶ್ರೀಮತಿ. ಜಿ.ಲಕ್ಷ್ಮಿ ಆದ ನೀವು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹುತ್ತೂರು ಗ್ರಾಮ ಪಂಚಾಯತ್, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, 13ನೇ ಹಣಕಾಸು ಯೋಜನೆಯಡಿ 2014-15ನೇ ಸಾಲಿನಲ್ಲಿ ಒಟ್ಟು ರೂ.12 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ.3 ಲಕ್ಷವನ್ನು ಶೇ.25 ಎಸ್.ಸಿ/ಎಸ್.ಟಿ ರವರಿಗೆ, ರೂ.36,000 ವನ್ನು ಶೇ.3 ಅಂಗವಿಕಲರಿಗೆ ಮತ್ತು ಇತರೆ ಕಾಮಗಾರಿಗಳಿಗೆ ರೂ.8,64,000/-ಗಳನ್ನು ಬಳಸಲು ಕ್ರಿಯಾ ಯೋಜನೆ ತಯಾರಿಸಿರುವುದು ದಿನಾಂಕ: 26/05/2014ರ ಪಂಚಾಯಿತಿ ನಡವಳಿಯಲ್ಲಿ ಕಂಡುಬಂದಿದೆ. ಸದರಿ ಕ್ರಿಯಾ ಯೋಜನೆಯನ್ನು, ಕೋಲಾರ ತಾಲ್ಲೂಕು ಪಂಚಾಯಿತಿ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದಿಸಿದ್ದಾರೆ. ಇರಬೇಕೆನ್ನುವುದು ಕಡ್ಡಾಯವಾಗಿದೆ. ಆದರೆ ಸದರಿ ಖರ್ಚುಗಳಿಗೆ ಸಂಬಂಧಿಸಿದ ವೋಚರ್‌ಗಳು ಲಭ್ಯವಿಲ್ಲ. ಸದರಿ ಚೆಕ್‌ಗಳನ್ನು ಆಯಾಯ ವ್ಯಕ್ತಿ / ಸಂಸ್ಥೆ ಹೆಸರಿಗೆ ನೀಡಿದ ಬಗ್ಗೆ ಸ್ವೀಕೃತಿಯನ್ನು ಪಡೆದ ಬಗ್ಗೆ ದಾಖಲೆಯಿಲ್ಲ. ಕಾರಣ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಜೆಟ್) ನಿಯಮಾವಳಿಗಳು, 2006ರ ನಿಯಮಗಳು ಮತ್ತು ಕರ್ನಾಟಕ ಆರ್ಥಿಕ ಸಂಹಿತತೆ ನಿಯಮಗಳು ಉಲ್ಲಂಘನೆಯಾಗಿರುತ್ತವೆ. ಮೇಲೆ ಹೇಳಿದ ಕಾರಣಗಳಿಂದಾಗಿ ರೂ.10,43,690/-ಗಳ ಖರ್ಚು ನಿಯಮಬಾಹಿರವಾಗಿದ್ದು, ಈ ದುರುಪಯೋಗದ ಮೊತ್ತಕ್ಕೆ ನೀವು ಸಂಪೂರ್ಣ ಜವಾಬ್ದಾರರಾಗಿರುತ್ತೀರಿ.

5) ಆದಕಾರಣ, ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1) ರ ಅಡಿಯಲ್ಲಿ ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ-2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

6) ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕ್ ಚೇಳೂರು ಹೋಬಳಿ ಪುಳಗಲ್ ಅಂಚೆ ಊದವಾರಪಲ್ಲಿ ಗ್ರಾಮದ ನಿವಾಸಿಯಾದ ಶ್ರೀ.ವಿ.ರಾಮಕೃಷ್ಣಪ್ಪ ಬಿನ್ ಲೇಟ್.ಆಂಜನೇಯಲು (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಹುತ್ತೂರು ಗ್ರಾಮ ಪಂಚಾಯತ್‌ನ 1) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ.ಜಿ.ಲಕ್ಷ್ಮಿ (ಇನ್ನು ಮುಂದೆ, '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

7) <u>ದೂರಿನ ಸಂಕ್ಷಿಪ್ತ ವಿವರಣೆ:-</u> ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಹುತ್ತೂರು ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದಂತೆ, 13ನೇ ಹಣಕಾಸು ಯೋಜನೆಯಡಿಯಲ್ಲಿ ದಿನಾಂಕ:12/06/14 ರಿಂದ 09/09/15 ರವರೆಗೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ? ಅದರಲ್ಲಿ ಎಷ್ಟು ಹಣ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ? ಎಂಬ ಬಗ್ಗೆ ಕ್ರಿಯಾ ಯೋಜನೆ ಮತ್ತು ಬ್ಯಾಂಕ್ ಫಾರ್ ಶೀಟ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ಮಾಹಿತಿ ಹಕ್ಕು ಅಧಿನಿಯಮದಡಿ ಕೋರಿದ್ದು, ಎದುರುದಾರರು ಬ್ಯಾಂಕ್ ಫಾರ್ ಶೀಟ್ ಮಾತ್ರ ನೀಡಿದ್ದಾರೆ. ಅದನ್ನು ಪರಿಶೀಲಿಸಲಾಗಿ, ರೂ.13,23,131/- ಹಣ ಬಂದಿರುವುದು ಕಂಡು ಬಂದಿದೆ. ಆದರೆ, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ನೀಡದಿರುವುದರಿಂದ, ಮಾಹಿತಿ ಹಕ್ಕು ಮೇಲ್ಮನವಿ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ದಾಖಲೆಗಳನ್ನು ನೀಡುವಂತೆ ನಿರ್ದೇಶನ ನೀಡಿದ್ದರೂ ಸಹ ಯಾವುದೇ ದಾಖಲೆಗಳನ್ನು ನೀಡಿಲ್ಲ. ಸದರಿ ಗ್ರಾಮ ಪಂಚಾಯತ್‌ಗೆ ಮಂಜೂರಾದ ಹಣವನ್ನು ಎದುರುದಾರರು ಅಭಿವೃದ್ಧಿ ಕೆಲಸಗಳಿಗೆ ಬಳಸದೇ ದುರುಪಯೋಗ ಪಡಿಸಿಕೊಂಡಿರುವುದು ಕಂಡು ಬಂದಿದೆಯೆಂದು ಹೇಳಿದ್ದಾರೆ.

8) ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ದೂರಿಗೆ ಸಂಬಂಧಿಸಿದಂತೆ ದಿನಾಂಕ:06/06/17ರಂದು ದೂರುದಾರರಿಗೆ ಮಾಹಿತಿ ನೀಡಿದೆಯಂದು ಹೇಳಿದ್ದಾರೆ.

9) ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ಸದರಿಯವರು ತಮ್ಮ ಪ್ರತ್ಯುತ್ತರದಲ್ಲಿ –

ದಿನಾಂಕ:12/06/14 ರಿಂದ 09/09/15ರ ಅವಧಿಯಲ್ಲಿ ರೂ.13,23,131/-ಗಳು ಜಮಾ ಆಗಿದ್ದು, ಬ್ಯಾಂಕ್ ಪಾಸ್ ಬುಕ್ ಹಾಳೆಯಲ್ಲಿ ಕಂಡು ಬಂದಿದ್ದು, ದೂರು ಸಲ್ಲಿಸಿದ ನಂತರ ಎದುರುದಾರರು ರೂ.7,31,402/-ಗಳಿಗೆ ಮಾತ್ರ ವೋಚರ್‌ಗಳನ್ನು ಕೊಟ್ಟಿದ್ದಾರೆ. ಉಳಿಕೆ ರೂ.5,91,729/-ಗಳಿಗೆ ವೋಚರನ್ನು ನೀಡಿಲ್ಲ. ದಾಖಲೆಗಳನ್ವಯ ಪ್ರತಿಯೊಂದು ಕಾಮಗಾರಿಗಳಿಗೆ ಕ್ರಿಯಾ ಯೋಜನೆ, ಅಂದಾಜು ದರಪಟ್ಟಿ, ಇತ್ಯಾದಿ ತಯಾರಿಸಿಲ್ಲ. ಸಾಮಗ್ರಿಗಳನ್ನು ಕೆಟಿಪಿಪಿ ನಿಯಮಗಳನ್ವಯ ಖರೀದಿಸಿಲ್ಲ. ಒಂದೇ ಮಳಿಗೆಯಲ್ಲಿ ಮಾರುಕಟ್ಟೆ ದರಕ್ಕಿಂತ ದುಪ್ಪಟ್ಟು ದರಕ್ಕೆ ಸಾಮಗ್ರಿಗಳನ್ನು ಖರೀದಿಸಿ ಇಲಾಖೆಗೆ ವಂಚನೆ ಮಾಡಿದ್ದಾರೆ, ವೋಚರ್‌ಗಳಲ್ಲಿ ಲೋಪದೋಷಗಳಿವೆ, ಅವುಗಳಲ್ಲಿ ಕ್ರಮ ಸಂಖ್ಯೆ ಮತ್ತು ದಿನಾಂಕವನ್ನು ನಮೂದಿಸಿಲ್ಲ, ಮಳಿಗೆಯ ಮಾಲೀಕರಿಂದ ಕಮಿಷನ್ ಹಣ ಪಡೆದು ದುಪ್ಪಟ್ಟು ಬೆಲೆಗೆ ಸಾಮಗ್ರಿಗಳನ್ನು ಖರೀದಿಸಿದ್ದು, ತಪ್ಪಿತಸ್ಥರ ಮೇಲೆ ಶಿಸ್ತು ಕ್ರಮ ಜರುಗಿಸಲು ಹೇಳಿದ್ದಾರೆ.

10) ದುರುಪಯೋಗದ ಮೊತ್ತಕ್ಕೆ ಜವಾಬ್ದಾರರಾದ ಅಧ್ಯಕ್ಷರುಗಳಾಗಿದ್ದ ಶ್ರೀ.ಕೋಟಿ ನಾರಾಯಣಸ್ವಾಮಿ ಮತ್ತು ಶ್ರೀಮತಿ.ಲಕ್ಷ್ಮಮ್ಮ ರವರುಗಳನ್ನು 2 ಮತ್ತು 3ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರಿಂದ ದೂರಿಗೆ ಆಕ್ಷೇಪಣೆಯನ್ನು ಕೇಳಲಾಗಿ, ಸದರಿಯವರುಗಳು ಆಕ್ಷೇಪಣೆಯನ್ನು ಸಲ್ಲಿಸಿಲ್ಲ,

11) ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1. ಹದಿಮೂರನೇ ಹಣಕಾಸು ಯೋಜನೆ ಅಡಿ 2014-15ನೇ ಸಾಲಿಗೆ ಹುತ್ತೂರು ಗ್ರಾಮ ಪಂಚಾಯತ್‌ಗೆ ಒಟ್ಟು ರೂ.12 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ.3 ಲಕ್ಷವನ್ನು ಶೇ.25 ಎಸ್.ಸಿ\ಎಸ್.ಟಿ ರವರಿಗೆ; ರೂ.36,000/-ವನ್ನು ಶೇ.3 ಅಂಗವಿಕಲರಿಗೆ ಮತ್ತು ಇತರೆ ಕಾಮಗಾರಿಗಳಿಗೆ ರೂ.8,64,000/-ಗಳನ್ನು ಬಳಸಲು ಕ್ರಿಯಾ ಯೋಜನೆಯನ್ನು ತಯಾರಿಸಿದೆಯೆಂದು ದಿ:26/05/14ರ ಪಂಚಾಯತ್ ನಡವಳಿಯಲ್ಲಿ ಕಂಡು ಬಂದಿದೆ. ಸದರಿ ಕ್ರಿಯಾ ಯೋಜನೆಯನ್ನು ಕೋಲಾರ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದಿಸಿದ್ದಾರೆ;

2. ಹುತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಎಸ್.ಸಿ\ಎಸ್.ಟಿ ಕಾಲೋನಿಯಲ್ಲಿ ಪೈಪ್‌ಲೈನ್ ಕಾಮಗಾರಿ, ಚರಂಡಿ ಸ್ವಚ್ಛತೆ ಹಾಗೂ ನೈರ್ಮಲ್ಯೀಕರಣ ಕಾಮಗಾರಿಗೆ ಸಂಬಂಧಿಸಿದಂತೆ, ನೆರನಹಳ್ಳಿ ಗ್ರಾಮದ ಚರಂಡಿಗಳಲ್ಲಿ ಹೂಳು ತೆಗೆಯುವ ಕಾಮಗಾರಿಯನ್ನು (ಅಂದಾಜು ರೂ.0.20 ಲಕ್ಷಗಳು) ಶ್ರೀ.ಎಲ್.ವೆಂಕಟೇಶಪ್ಪ ರವರಿಗೆ ವಹಿಸಿರುವುದು ಕಂಡು

ಬಂದಿದ್ದು, ಅದರ ಬಾಬ್ತು ರೂ.11,430/-ಗಳಿಗೆ ಚೆಕ್ ಸಂಖ್ಯೆ:101639 ಮುಖಾಂತರ ಗುತ್ತಿಗೆದಾರರಿಗೆ ನೀಡಿರುವುದು ಕಂಡು ಬಂದಿದೆ. ಸದರಿ ಕಾಮಗಾರಿಯನ್ನು 1ನೇ ಎದುರುದಾರರೇ ಪರಿಶೀಲಿಸಿದ್ದಾರೆಂದು ಮುಕ್ತಾಯದ ವರದಿಯಲ್ಲಿ ಕಂಡು ಬಂದಿದೆ. ಸದರಿ ಕಾಮಗಾರಿಯನ್ನು ಗುತ್ತಿಗೆದಾರರಿಗೆ ತುಂಡು ಗುತ್ತಿಗೆ ಆಧಾರದಲ್ಲಿ ವಹಿಸಿರುವುದು ಕಂಡು ಬಂದಿದ್ದು, ಸದರಿ ಗುತ್ತಿಗೆ ಕರಾರಿನಲ್ಲಿ ಕಾಮಗಾರಿಯ ಹೆಸರಾಗಲೀ ಅಥವಾ ಕರಾರು ಮಾಡಿಕೊಂಡ ದಿನಾಂಕವನ್ನು ಖಾಲಿಯಾಗಿ ಬಿಟ್ಟಿದ್ದು, ಗುತ್ತಿಗೆದಾರರು ಮತ್ತು ಎದುರುದಾರರ ಸಹಿಗಳು ಮಾತ್ರ ನಮೂದಾಗಿರುವುದು ಕಂಡು ಬಂದಿದೆ. ಚರಂಡಿ ಹೂಳೆತ್ತುವ ಕಾಮಗಾರಿಗೆ ಸಂಬಂಧಿಸಿದಂತೆ ಪ್ರತಿ ಹಂತದ ಕಾಮಗಾರಿಯ ಭಾವಚಿತ್ರಗಳು, ಎತ್ತಿದ ಹೂಳಿನ ಪ್ರಮಾಣ ತೋರಿಸುವ ಭಾವಚಿತ್ರ ಮತ್ತು ಇತರೆ ದಾಖಲೆಗಳಿಲ್ಲ. ಆದ್ದರಿಂದ, ಚರಂಡಿ ಹೂಳೆತ್ತುವ ಕಾಮಗಾರಿಯನ್ನು ಸಂಪೂರ್ಣವಾಗಿ ಗುತ್ತಿಗೆದಾರರು ನಿರ್ವಹಿಸಿದ್ದಾರೆಂದು ಹೇಳಲಾಗುವುದಿಲ್ಲ;

3. ಹುತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ರಾಮಸಂದ್ರ ಗ್ರಾಮದ ಚರಂಡಿಗಳಲ್ಲಿ ಹೂಳು ತೆಗೆಯುವ ಕಾಮಗಾರಿಯನ್ನು (ಅಂದಾಜು ರೂ.0.39 ಲಕ್ಷಗಳು) ಶ್ರೀ.ಆರ್.ಎಂ.ಪ್ರತಾಪ್ ರವರಿಗೆ ವಹಿಸಿರುವುದು ಕಂಡು ಬಂದಿದ್ದು, ಅದರ ಬಾಬ್ತು ರೂ.38,465/-ಗಳಿಗೆ ಚೆಕ್ ಸಂಖ್ಯೆ:000652 ಮತ್ತು 001907 ಮುಖಾಂತರ ಗುತ್ತಿಗೆದಾರರಿಗೆ ನೀಡಿರುವುದು ಕಂಡು ಬಂದಿದೆ. ಸದರಿ ಕಾಮಗಾರಿಯನ್ನು ಗುತ್ತಿಗೆದಾರರಿಗೆ ತುಂಡು ಗುತ್ತಿಗೆ ಆಧಾರದಲ್ಲಿ ವಹಿಸಿರುವುದು ಕಂಡು ಬಂದಿದ್ದು, ಸದರಿ ಗುತ್ತಿಗೆ ಕರಾರಿನಲ್ಲಿ ಕಾಮಗಾರಿಯ ಹೆಸರಾಗಲೀ ಅಥವಾ ಕರಾರು ಮಾಡಿಕೊಂಡ ದಿನಾಂಕವನ್ನು ಖಾಲಿಯಾಗಿ ಬಿಟ್ಟಿದ್ದು, ಗುತ್ತಿಗೆದಾರರು ಮತ್ತು 1ನೇ ಎದುರುದಾರರ ಸಹಿಗಳು ಮಾತ್ರ ನಮೂದಾಗಿರುವುದು ಕಂಡು ಬಂದಿದೆ. ಚರಂಡಿ ಹೂಳೆತ್ತುವ ಕಾಮಗಾರಿಗೆ ಸಂಬಂಧಿಸಿದಂತೆ ಪ್ರತಿ ಹಂತದ ಕಾಮಗಾರಿಯ ಭಾವಚಿತ್ರಗಳು, ಎತ್ತಿದ ಹೂಳಿನ ಪ್ರಮಾಣ ತೋರಿಸುವ ಭಾವಚಿತ್ರ ಮತ್ತು ಇತರೆ ದಾಖಲೆಗಳಿಲ್ಲ. ಆದ್ದರಿಂದ, ಚರಂಡಿ ಹೂಳೆತ್ತುವ ಕಾಮಗಾರಿಯನ್ನು ಸಂಪೂರ್ಣವಾಗಿ ಗುತ್ತಿಗೆದಾರರು ನಿರ್ವಹಿಸಿದ್ದಾರೆಂದು ಹೇಳಲಾಗುವುದಿಲ್ಲ;

4. ಹುತ್ತೂರು ಗ್ರಾಮ ಪಂಚಾಯತ್‌ನ ವತಿಯಿಂದ ನಡೆದ ವಿವಿಧ ಕಾಮಗಾರಿಗಳಿಗೆ ಜೂನ್, 2014 ರಿಂದ ಸೆಪ್ಟೆಂಬರ್, 2015ರ ಅವಧಿಯಲ್ಲಿ ಈ ಕೆಳಗಿನಂತೆ ಖರ್ಚು ಹಾಕಿರುವುದು ಜಮಾ-ಖರ್ಚಿನ ವಿವರ ಮತ್ತು ಬ್ಯಾಂಕ್ ಪಾಸ್ ಪುಸ್ತಕದ ಪ್ರತಿಯಲ್ಲಿ ಕಂಡು ಬಂದಿದೆ –

| ಕ್ರ.ಸಂ. | ಹೆಸರು ಶ್ರೀ.\ ಶ್ರೀಮತಿ. | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ರೂ.ಗಳಲ್ಲಿ |
|---|---|---|---|---|
| 1 | ರಿಷಬ್ ಮೆಟಲ್ಸ್ | 000640 | 05/06/14 | 28781.00 |
| 2 | ದೇವರಾಜ್ ಬೋರ್‌ವೆಲ್ಸ್ | 001521 | 10/06/14 | 45400.00 |
| 3 | ಗೋವಿಂದಪ್ಪ | 001522 | 12/06/14 | 18630.00 |

| | | | | |
|---|---|---|---|---|
| 4 | ಹೆಚ್.ಎಂ.ನಾಗೇಶ್ | 001523 | 12/06/14 | 13880.00 |
| 5 | ವೆಂಕಟರಾಮಪ್ಪ | 001524 | 12/06/14 | 29211.00 |
| 6 | ಥಲಪತಿ | 001525 | 12/06/14 | 9239.00 |
| 7 | ನಾಗರಾಜ | 001526 | 12/06/14 | 70685.00 |
| 8 | ವಿ.ಎನ್.ಸುನೀಲ್‌ಬಾಬು | 001527 | 12/06/14 | 14000.00 |
| 9 | ಥಲಪತಿ | 001528 | 12/06/14 | 8280.00 |
| 10 | ಡಿ.ಶಂಕರಪ್ಪ | 001529 | 13/06/14 | 3500.00 |
| 11 | ಎಂ.ಹೆಚ್.ಸುಬ್ಬಣ್ಣ | 001530 | 13/06/14 | 8000.00 |
| 12 | ರಿಷಬ್ ಮೆಟಲ್ಸ್ | 001641 | 05/07/14 | 9458.00 |
| 13 | ವಿ.ಎನ್.ಸುನೀಲ್‌ಬಾಬು | 001642 | 05/07/14 | 7160.00 |
| 14 | ಸುಮಂತ್ ಎಂಟರ್‌ಪ್ರೈಸಸ್ | 001643 | 05/07/14 | 60000.00 |
| 15 | 1084210000ಗೆ | 001644 | 25/07/14 | 23680.00 |
| 16 | ಎನ್.ದೇವರಾಜ್ | 001645 | 05/08/14 | 4000.00 |
| 17 | ದೇವರಾಜ್ ಬೋರ್‌ವೆಲ್ಸ್ | 001646 | 19/08/14 | 10000.00 |
| 18 | ವಿ.ವೆಂಕಟರಾಮಪ್ಪ | 001649 | 05/09/14 | 32615.00 |
| 19 | ಕೆ.ವಿಜಯಕುಮಾರ್ | 001650 | 23/09/14 | 18000.00 |
| 20 | ಎಸ್.ಎಸ್.ಪಂಪ್ಸ್ | 001901 | 23/09/14 | 79011.00 |
| 21 | ರಿಷಬ್ ಮೆಟಲ್ಸ್ | 001902 | 23/09/14 | 28380.00 |
| 22 | ಅಂಜಪ್ಪ | 001903 | 23/09/14 | 6185.00 |
| 23 | ವಿ.ಎನ್.ಸುನೀಲ್‌ಬಾಬು | 001904 | 23/09/14 | 27427.00 |
| 24 | ಗೋವಿಂದಪ್ಪ | 001905 | 20/10/14 | 5198.00 |
| 25 | ವೆಂಕಟಮುನಿಯಪ್ಪ | 001906 | 20/10/14 | 3000.00 |
| 26 | ಆರ್.ಎಂ.ಪ್ರತಾಪ್ | 001907 | 03/11/14 | 20000.00 |
| 27 | ದೇವರಾಜ್ ಬೋರ್‌ವೆಲ್ಸ್ | 001908 | 03/11/14 | 46560.00 |
| 28 | ಮಾರುತಿ ಲಿಫ್ಟಿಂಗ್ ವರ್ಕ್ಸ್ | 001909 | 03/11/14 | 5840.00 |
| 29 | ಅಮರಾವತಿ | 001910 | 11/11/14 | 10000.00 |
| 30 | -- | 000651 | 15/11/14 | 15000.00 |
| 31 | ಆರ್.ಎಂ.ಪ್ರತಾಪ್ | 000652 | 24/11/14 | 18465.00 |
| 32 | ವೆಂಕಟರಾಮಪ್ಪ | 000653 | 16/12/14 | 16100.00 |
| 33 | ಸೆಲ್ಫ್ | 000654 | 16/12/14 | 1090.00 |
| 34 | ರಿಷಬ್ ಮೆಟಲ್ಸ್ | 000655 | 30/12/14 | 30000.00 |
| 35 | ರೆಡ್ಡಪ್ಪ | 000656 | 10/03/15 | 4500.00 |
| 36 | ಮುನಿನಾರಾಯಣ | 000657 | 23/03/15 | 3065.00 |
| 37 | ವಿ.ಎನ್.ಸುನೀಲ್‌ಬಾಬು | 000658 | 08/05/15 | 20000.00 |

| | | | | |
|---|---|---|---|---|
| 38 | ಎಸ್.ಎಸ್.ಪಂಪ್ಸ್ | 000659 | 08/05/15 | 50000.00 |
| 39 | ರಿಷಬ್ ಮೆಟಲ್ಸ್ | 000641 | 08/05/15 | 50000.00 |
| 40 | ದೇವರಾಜ್ ಬೋರ್‌ವೆಲ್ಸ್ | 000661 | 08/05/15 | 30000.00 |
| 41 | ರಿಷಬ್ ಮೆಟಲ್ಸ್ | 000662 | 21/07/15 | 81285.00 |
| 42 | ಎಸ್.ಎಸ್.ಪಂಪ್ಸ್ | 000660 | 03/08/15 | 21803.00 |
| 43 | ಎಸ್‌ಬಿ ಖಾತೆ–004464 | 000643 | 01/09/15 | 4660.00 |
| 44 | ಎಸ್‌ಬಿ ಖಾತೆ–006833 | 000648 | 01/09/15 | 1210.00 |
| 45 | ಗೋವಿಂದಪ್ಪ | 000649 | 01/09/15 | 16786.00 |
| 46 | ಎಸ್‌ಬಿ ಖಾತೆ–004717 | 000646 | 10/09/15 | 1747.00 |
| 47 | ನಾಗರಾಜಪ್ಪ | 000647 | 11/09/15 | 738.00 |
| 48 | ಶ್ರೀರಾಮಪ್ಪ | 000663 | 11/09/15 | 23760.00 |
| 49 | ರಾಜು.ಎಂ | 000664 | 11/09/15 | 4309.00 |
| 50 | 1084210100 | | 14/09/15 | 1350.00 |
| 51 | 1084210000 | 000644 | 18/09/15 | 1702.00 |
| ಒಟ್ಟು ಮೊತ್ತ | | | | 1043690.00 |

5. ಮೇಲಿನ ಉಪ ಖಂಡಿಕೆ–4ರ ಖರ್ಚುಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ದಾಖಲೆಗಳನ್ವಯ ಖರ್ಚುಗಳಲ್ಲಿನ ನ್ಯೂನತೆಗಳು ಈ ಕೆಳಗಿನಂತಿವೆ –

i. ಕ್ರಮ ಸಂಖ್ಯೆ–1 – ರಿಷಬ್ ಮೆಟಲ್ಸ್ & ಪೈಪ್ಸ್‌ನ ದಿ:02/05/14ರ ಇನ್‌ವಾಯ್ಸ್ ಸಂಖ್ಯೆ:55 ಮೊತ್ತ ರೂ.22,535/– ಮತ್ತು ದಿ:06/05/14ರ ಇನ್‌ವಾಯ್ಸ್ ಸಂಖ್ಯೆ:63 ಮೊತ್ತ ರೂ.6,246/– ಇದೆ. ನರಸನಹಳ್ಳಿ ಗ್ರಾಮ ಹಾಗೂ ಹೊಳಲಿ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳ ಖರೀದಿಗೆ ಎಂದು ನಗದು ವಹಿಯಲ್ಲಿ ನಮೂದಿಸಿದೆ. ಎರಡು ಬಿಲ್ಲುಗಳನ್ನು ಸೇರಿ ಒಂದೇ ಚೆಕ್ ಅನ್ನು ನೀಡಿರುವುದು ಕಂಡು ಬಂದಿದೆ;

ii. ಕ್ರಮ ಸಂಖ್ಯೆ–2 – ದೇವರಾಜ ಬೋರ್‌ವೆಲ್ ಲಿಫ್ಟಿಂಗ್ ವರ್ಕ್ಸ್‌ನ ದಿ:24/05/14ರ ಕ್ರೆಡಿಟ್ ಬಿಲ್ ನಂ.499 ಮೊತ್ತ ರೂ.3760/–, ದಿ:22/05/14ರ ಕ್ರೆಡಿಟ್ ಬಿಲ್ ನಂ.498 ಮೊತ್ತ ರೂ.3760/–, ದಿ:21/05/14ರ ಕ್ರೆಡಿಟ್ ಬಿಲ್ ನಂ.497 ಮೊತ್ತ ರೂ.800/–, ದಿ:08/04/14ರ ಕ್ರೆಡಿಟ್ ಬಿಲ್ ನಂ.495 ಮೊತ್ತ ರೂ.1600/–, ದಿ:25/03/14ರ ಕ್ರೆಡಿಟ್ ಬಿಲ್ ನಂ.493 ಮೊತ್ತ ರೂ.4000/–, ದಿ:18/03/14ರ ಕ್ರೆಡಿಟ್ ಬಿಲ್ ನಂ.492 ಮೊತ್ತ ರೂ.3200/–, ದಿ:10/03/14ರ ಕ್ರೆಡಿಟ್ ಬಿಲ್ ನಂ.489 ಮೊತ್ತ ರೂ.1600/–, ದಿ:05/03/14ರ ಕ್ರೆಡಿಟ್ ಬಿಲ್ ನಂ.488 ಮೊತ್ತ ರೂ.3140/–, ದಿ:25/02/14ರ ಕ್ರೆಡಿಟ್ ಬಿಲ್ ನಂ.487 ಮೊತ್ತ ರೂ.2480/–, ದಿ:20/05/14ರ ಕ್ರೆಡಿಟ್ ಬಿಲ್ ನಂ.496 ಮೊತ್ತ ರೂ.1600/–, ದಿ:04/04/14ರ

ಕ್ರೆಡಿಟ್ ಬಿಲ್ ನಂ.494 ಮೊತ್ತ ರೂ.3360/-, ದಿ:16/03/14ರ ಕ್ರೆಡಿಟ್ ಬಿಲ್ ನಂ.491 ಮೊತ್ತ ರೂ.800/-, ದಿ:15/03/14ರ ಕ್ರೆಡಿಟ್ ಬಿಲ್ ನಂ.490 ಮೊತ್ತ ರೂ.1600/-, ದಿ:18/02/14ರ ಕ್ರೆಡಿಟ್ ಬಿಲ್ ನಂ.486 ಮೊತ್ತ ರೂ.800/-, ದಿ:15/02/14ರ ಕ್ರೆಡಿಟ್ ಬಿಲ್ ನಂ.484 ಮೊತ್ತ ರೂ.800/-, ದಿ:17/02/14ರ ಕ್ರೆಡಿಟ್ ಬಿಲ್ ನಂ.485 ಮೊತ್ತ ರೂ.1600/-, ದಿ:01/02/14ರ ಕ್ರೆಡಿಟ್ ಬಿಲ್ ನಂ.301 ಮೊತ್ತ ರೂ.3200/- ಮತ್ತು ದಿ:01/02/14ರ ಕ್ರೆಡಿಟ್ ಬಿಲ್ ನಂ.302 ಮೊತ್ತ ರೂ.7300/- ಇದೆ. ಗ್ರಾಮಗಳಲ್ಲಿ ಪಂಪ್, ಮೋಟಾರ್ ಮತ್ತು ಪೈಪುಗಳನ್ನು ಎತ್ತಿ-ಇಳಿಸಿದ ಬಾಬ್ತು ದೇವರಾಜ ಬೋರ್‌ವೆಲ್ಸ್ ಲಿಫ್ಟಿಂಗ್ ವರ್ಕ್ಸ್ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ನಮೂದಿಸಿದೆ. ಸದರಿ ಎಲ್ಲಾ ಬಿಲ್ಲುಗಳು ಪಂಚಾಯತ್ ಹೆಸರಿನಲ್ಲಿ ಇಲ್ಲ;

iii. ಕ್ರಮ ಸಂಖ್ಯೆ-3 - ಹೊಳಲಿ ಗ್ರಾಮದಲ್ಲಿ ಪೈಪ್‌ಲೈನ್‌ಗಾಗಿ ಸಾಮಗ್ರಿ ಖರೀದಿ ಮತ್ತು ಕೂಲಿ ಬಾಬ್ತು ಎಂದು ನಗದು ವಹಿಯಲ್ಲಿ ನಮೂದಿಸಿದೆ. ಶ್ರೀ.ಗೋವಿಂದಪ್ಪ ರವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

iv. ಕ್ರಮ ಸಂಖ್ಯೆ-4 - ಹೊಳಲಿ ಹೊಸೂರು ಗ್ರಾಮದ ಹೊಸ ಬೋರ್‌ವೆಲ್ ಹತ್ತಿರ ಸಾಮಗ್ರಿಗಳ ಖರೀದಿ ಹಾಗೂ ಟಿಸಿ ಶಿಫ್ಟಿಂಗ್ ಬಾಬ್ತು ಎಂದು ನಗದು ವಹಿಯಲ್ಲಿ ನಮೂದಿಸಿದೆ. ಚೆಕ್ ಅನ್ನು ಶ್ರೀ.ಹೆಚ್.ಎಂ.ನಾಗೇಶ್ ರವರ ಹೆಸರಿನಲ್ಲಿ ನೀಡಲಾಗಿದ್ದು, ಅವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ. ಸದರಿ ಮೊತ್ತಕ್ಕೆ ರಿಷಬ್ ಮೆಟಲ್ಸ್ & ಪೈಪ್ಸ್ ಎಂಬ ಸಂಸ್ಥೆಯ ಅಂದಾಜು (ದಿನಾಂಕ ನಮೂದಿಲ್ಲ) ರೂ.7,255/-ಗಳಿಗೆ ಮಾತ್ರ ಇದ್ದು, ಅದರ ಮೇಲೆ ಚೆಕ್ ಸಂಖ್ಯೆ ಮತ್ತು ದಿನಾಂಕ ನಮೂದಿಸಿ, ರೂ.13,880/-ಗಳನ್ನು ಪಾವತಿಸಿರುವುದು ಕಂಡು ಬಂದಿದೆ;

v. ಕ್ರಮ ಸಂಖ್ಯೆ-5 - ಬೆಳಗಾನಹಳ್ಳಿ ಗ್ರಾಮದ ಕುಡಿಯುವ ನೀರಿನ ಸಾಮಗ್ರಿಗಳು ಮತ್ತು ಪಂಪ್ ಮೋಟಾರ್ ರಿಪೇರಿಗೆಂದು ನಗದು ವಹಿಯಲ್ಲಿ ನಮೂದಿಸಿದೆ. ಚೆಕ್ ಅನ್ನು ಶ್ರೀ.ವೆಂಕಟರಾಮಪ್ಪ ರವರ ಹೆಸರಿನಲ್ಲಿ ನೀಡಿದ್ದು, ಅವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ. ಅಮೃತ ರಿಲೇ ಇಂಜಿನಿಯರಿಂಗ್ ವರ್ಕ್ಸ್‌ನ ಕ್ಯಾಷ್ \ ಕ್ರೆಡಿಟ್ ಬಿಲ್ ಸಂಖ್ಯೆ-32 (ದಿನಾಂಕ ನಮೂದಿಲ್ಲ) ಮೇಲೆ ಸದರಿ ಚೆಕ್ ನಂಬರ್ ಮತ್ತು ಮೊತ್ತದ ನಮೂದಿದ್ದು, ಸದರಿ ಬಿಲ್ಲಿನ ಒಟ್ಟು ಮೊತ್ತ ರೂ.15,450/- ಆಗಿದೆ;

vi. ಕ್ರಮ ಸಂಖ್ಯೆ-6 - ಶ್ರೀ.ಛಲಪತಿ ತಂಬಿಹಳ್ಳಿ ರವರಿಗೆ ಕೊಳವೆ ಬಾವಿಗೆ ಮತ್ತು ಕುಡಿಯುವ ನೀರಿನ ಸಾಮಗ್ರಿಗಳ ಖರೀದಿಗೆ ನೀಡಿದೆಯೆಂದು ನಗದು ವಹಿಯಲ್ಲಿ ನಮೂದಿಸಿದೆ. ಆದರೆ, ಅವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

vii. ಕ್ರಮ ಸಂಖ್ಯೆ-7 – ಹೊಳಲಿ ಗ್ರಾಮದ ಕೆರೆ ಮರವಿ ಹತ್ತಿರ ಇರುವ ಕೊಳವೆ ಬಾವಿಗೆ ಹೊಸ ಕೇಬಲ್ ಅಳವಡಿಕೆಗೆ ನಾಗರಾಜ ಸ್ಟೋರ್ಸ್, ಕೋಲಾರ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ನಮೂದಿಸಿದೆ. ಆದರೆ, ಸದರಿ ಸಂಸ್ಥೆಯ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ. ಆದರೆ, ಸದರಿ ಮೊತ್ತಕ್ಕೆ ನಾಗರಾಜ ಟ್ರೇಡರ್ಸ್ ಹೆಸರಿನ ದಿ:06/06/14ರ ಇನ್‌ವಾಯ್ಸ್ ಸಂಖ್ಯೆ:3345 ಇದೆ;

viii. ಕ್ರಮ ಸಂಖ್ಯೆ-8 – ಶ್ರೀ.ವಿ.ಎನ್.ಸುನೀಲ್‌ಬಾಬು ರವರಿಗೆಂದು ನಗದು ವಹಿಯಲ್ಲಿ ನಮೂದಿಸಿದ್ದು, ಸದರಿಯವರ ಹೆಸರಿಗೆ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

ix. ಕ್ರಮ ಸಂಖ್ಯೆ-9 – ಛಲಪತಿ ಸ್ಟೋರ್ಸ್, ತಂಬಿಹಳ್ಳಿ ರವರಿಗೆ ನರನಹಳ್ಳಿ ಗ್ರಾಮಕ್ಕೆ ಪೈಪ್‌ಲೈನ್‌ಗಾಗಿ ಸಾಮಗ್ರಿಗಳ ಖರೀದಿಗೆ ನೀಡಿದೆಯೆಂದು ನಗದು ವಹಿಯಲ್ಲಿ ನಮೂದಿಸಿದೆ. ಆದರೆ, ಅವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

x. ಕ್ರಮ ಸಂಖ್ಯೆ-10 – ಶ್ರೀ.ಡಿ.ಶಂಕರಪ್ಪ ರವರಿಗೆ ಬಿಡಿ ಸಾಮಗ್ರಿಗಳ ಖರೀದಿಗಾಗಿ ನೀಡಿದೆಯೆಂದು ನಗದು ವಹಿಯಲ್ಲಿ ನಮೂದಿಸಿದೆ. ಆದರೆ, ಅವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

xi. ಕ್ರಮ ಸಂಖ್ಯೆ-11 – ಮೇಡಿ ತಂಬಿಹಳ್ಳಿ ಗ್ರಾಮದ ಕುಡಿಯುವ ನೀರಿನ ಕೊಳವೆ ಬಾವಿಗೆ ಸಾಮಗ್ರಿ ಖರೀದಿಗೆಂದು ನಗದು ವಹಿಯಲ್ಲಿ ಹೇಳಿದೆ. ಶ್ರೀ.ಎಂ.ಹೆಚ್.ಸುಬ್ಬಣ್ಣ ರವರ ಹೆಸರಿನಲ್ಲಿ ಚೆಕ್ ಅನ್ನು ನೀಡಿದ್ದು, ಅವರ ಹೆಸರಿನಲ್ಲಿ ರಸೀದಿ ಇಲ್ಲ;

xii. ಕ್ರಮ ಸಂಖ್ಯೆ-12 – ರಿಷಬ್ ಮೆಟಲ್ಸ್ & ಪೈಪ್ಸ್‌ನ ದಿ:15/06/14ರ ಇನ್‌ವಾಯ್ಸ್ ಸಂಖ್ಯೆ:144 ಮೊತ್ತ ರೂ.9,458/- ಇದೆ;

xiii. ಕ್ರಮ ಸಂಖ್ಯೆ-13 – ಗ್ರಾಮ ಪಂಚಾಯತ್‌ಗೆ ಬ್ಲೀಚಿಂಗ್ ಪೌಡರ್ ಖರೀದಿ ಹಾಗೂ ಬುಕ್ ಬೈಂಡಿಂಗಾಗಿ ನಗದು ವಹಿಯಲ್ಲಿ ನಮೂದಿಸಿದ್ದು, ಎಸ್‌ಎಂಎಸ್ ಸಿಲ್ಕ್ ಎಂಟರ್‌ಪ್ರೈಸಸ್ ಸಂಸ್ಥೆಯ ದಿ:02/07/14ರ ರಸೀದಿ (ಸಂಖ್ಯೆ ನಮೂದಿಲ್ಲ) ಮೊತ್ತ ರೂ.4,160/- ಮತ್ತು ಸುಪ್ರಿಯಾ ಬೈಂಡಿಂಗ್ ವರ್ಕ್ಸ್‌ನ ಬಿಲ್ ಸಂಖ್ಯೆ:23 ದಿ03/07/14 ಮೊತ್ತ ರೂ.3,000/-ಕ್ಕೆ ಇದೆ. ಎಸ್‌ಎಂಎಸ್ ಸಿಲ್ಕ್ ಎಂಟರ್‌ಪ್ರೈಸಸ್ ಸಂಸ್ಥೆಯ ಬಿಲ್ಲಿನ ಮೇಲೆ ಚೆಕ್ ಸಂಖ್ಯೆಯನ್ನು ನಮೂದಿಸಿದೆ;

xiv. ಕ್ರಮ ಸಂಖ್ಯೆ-14 – ಸುಮಂತ್ ಎಂಟರ್‌ಪ್ರೈಸಸ್‌ನ ಬಿಲ್ ಸಂಖ್ಯೆ:609 ದಿ:10/07/14 ಇದೆ;

xv. ಕ್ರಮ ಸಂಖ್ಯೆ-15 – ಹೊಳಲಿ ಗ್ರಾಮದ ಪಂಪ್ ಮತ್ತು ಮೋಟಾರ್ ರಿಪೇರಿ ಹಾಗೂ ಎತ್ತಿ ಇಳಿಸಿದ ಬಾಬ್ತು ಶ್ರೀ.ಬಿ.ಎಂ.ಆನಂದ್, ಎಸ್.ಆರ್.ಏಜೆನ್ಸಿ ರವರಿಗೆ ಎಂದು ನಗದು ವಹಿಯಲ್ಲಿ ಹೇಳಿದೆ. ಆದರೆ, ಸದರಿ ಮೊತ್ತಕ್ಕೆ ಬಿಲ್ ಇಲ್ಲ. ಎಸ್.ಆರ್.ಏಜೆನ್ಸೀಸ್ & ಲಿಫ್ಟಿಂಗ್ ವರ್ಕ್ಸ್‌ನ ಬಿಲ್ ಸಂಖ್ಯೆ-37, ದಿ:10/02/14 ಮೊತ್ತ ರೂ.800/-, ಬಿಲ್ ಸಂಖ್ಯೆ-34, ದಿ:17/02/14 ಮೊತ್ತ ರೂ.3,840/-, ಬಿಲ್ ಸಂಖ್ಯೆ-33, ದಿ:18/02/14 ಮೊತ್ತ ರೂ.2,240/-, ಬಿಲ್ ಸಂಖ್ಯೆ-45, ದಿ:23/02/14 ಮೊತ್ತ ರೂ.4,080/-, ಬಿಲ್ ಸಂಖ್ಯೆ-35, ದಿ:24/02/14 ಮೊತ್ತ ರೂ.3,840/-, ಬಿಲ್ ಸಂಖ್ಯೆ-36, ದಿ:28/02/14 ಮೊತ್ತ ರೂ.3,840/-, ಬಿಲ್ ಸಂಖ್ಯೆ-38, ದಿ:03/03/14 ಮೊತ್ತ ರೂ.1,000/-, ಬಿಲ್ ಸಂಖ್ಯೆ-39, ದಿ:14/03/14 ಮೊತ್ತ ರೂ.2,880/-, ಬಿಲ್ ಸಂಖ್ಯೆ-44, ದಿ:15/03/14 ಮೊತ್ತ ರೂ.3,120/-, ಬಿಲ್ ಸಂಖ್ಯೆ-40, ದಿ:17/03/14 ಮೊತ್ತ ರೂ.900/-, ಬಿಲ್ ಸಂಖ್ಯೆ-42, ದಿ:18/03/14 ಮೊತ್ತ ರೂ.900/-, ಬಿಲ್ ಸಂಖ್ಯೆ-50, ದಿ:25/03/14 ಮೊತ್ತ ರೂ.1,200/-, ಬಿಲ್ ಸಂಖ್ಯೆ-, ದಿ:25/03/14 ಮೊತ್ತ ರೂ.3,360/-, ಬಿಲ್ ಸಂಖ್ಯೆ-47, ದಿ:21/04/14 ಮೊತ್ತ ರೂ.900/-, ಬಿಲ್ ಸಂಖ್ಯೆ-53, ದಿ:22/04/14 ಮೊತ್ತ ರೂ.2,000/-, ಬಿಲ್ ಸಂಖ್ಯೆ-48, ದಿ:22/04/14 ಮೊತ್ತ ರೂ.3,360/-, ಬಿಲ್ ಸಂಖ್ಯೆ-51, ದಿ:25/04/14 ಮೊತ್ತ ರೂ.2,720/-, ಬಿಲ್ ಸಂಖ್ಯೆ-55, ದಿ:26/04/14 ಮೊತ್ತ ರೂ.3,360/-, ಬಿಲ್ ಸಂಖ್ಯೆ-80, ದಿ:05/05/14 ಮೊತ್ತ ರೂ.4,780/-, ಬಿಲ್ ಸಂಖ್ಯೆ-56, ದಿ:18/05/14 ಮೊತ್ತ ರೂ.3,760/-, ಬಿಲ್ ಸಂಖ್ಯೆ-57, ದಿ:19/05/14 ಮೊತ್ತ ರೂ.900/-, ಬಿಲ್ ಸಂಖ್ಯೆ-58, ದಿ:23/05/14 ಮೊತ್ತ ರೂ.3,760/-, ಬಿಲ್ ಸಂಖ್ಯೆ-63, ದಿ:23/05/14 ಮೊತ್ತ ರೂ.4,000/-, ಬಿಲ್ ಸಂಖ್ಯೆ-64, ದಿ:29/05/14 ಮೊತ್ತ ರೂ.2,800/-, ಬಿಲ್ ಸಂಖ್ಯೆ-65, ದಿ:10/06/14 ಮೊತ್ತ ರೂ.2,200/-, ಬಿಲ್ ಸಂಖ್ಯೆ-66, ದಿ:17/06/14 ಮೊತ್ತ ರೂ.3,200/- ಮತ್ತು ಬಿಲ್ ಸಂಖ್ಯೆ-78, ದಿ:12/07/14 ಮೊತ್ತ ರೂ.2,005/- ಲಭ್ಯವಿದೆ. ಸದರಿ ಯಾವುದೇ ಬಿಲ್ಲುಗಳು ಪಂಚಾಯತ್ ಹೆಸರಿನಲ್ಲಿ ಇಲ್ಲ;

xvi. ಕ್ರಮ ಸಂಖ್ಯೆ-16 – ಬೆಳಗಾನಹಳ್ಳಿ ಪೈಪ್‌ಲೈನ್ ದುರಸ್ತಿಗೆ ಎನ್.ದೇವರಾಜ್ ರವರಿಗೆಂದು ನಗದು ವಹಿಯಲ್ಲಿ ನಮೂದಿಸಿದೆ. ಚೆಕ್ ಅನ್ನು ಎನ್.ದೇವರಾಜ್ ರವರ ಹೆಸರಿಗೆ ನೀಡಿದೆ. ಆದರೆ, ಅವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

xvii. ಕ್ರಮ ಸಂಖ್ಯೆ-17 – ಶ್ರೀ ದೇವರಾಜ ಬೋರ್‌ವೆಲ್ ಲಿಫ್ಟಿಂಗ್ ವರ್ಕ್ಸ್ ರವರಿಗೆಂದು ನಗದು ವಹಿಯಲ್ಲಿ ನಮೂದಿಸಿದೆ. ಚೆಕ್ ಅನ್ನು ದೇವರಾಜ್ ಬೋರ್‌ವೆಲ್ ವರ್ಕ್ಸ್



B

ರವರ ಹೆಸರಿಗೆ ನೀಡಿದೆ. ಆದರೆ, ಸದರಿ ಸಂಸ್ಥೆಯ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

xviii. ಕ್ರಮ ಸಂಖ್ಯೆ-18 – ಬೆಳಗಾನಹಳ್ಳಿ ಗ್ರಾಮದ ಮೋಟಾರ್ ಬೇರಿಂಗ್, ವೈಂಡಿಂಗ್ ದುರಸ್ತಿ ಇತ್ಯಾದಿ ಎಂದು ನಗದು ವಹಿಯಲ್ಲಿ ನಮೂದಿಸಿದೆ. ಚೆಕ್ ಅನ್ನು ಶ್ರೀ.ವೆಂಕಟರಾಮಪ್ಪ ರವರ ಹೆಸರಿನಲ್ಲಿ ನೀಡಿದ್ದು, ಅವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ. ಅಮೃತ ರಿಲೇ ಇಂಜಿನಿಯರಿಂಗ್ ವರ್ಕ್ಸ್‌ನ ಕ್ಯಾಷ್ \ ಕ್ರೆಡಿಟ್ ಬಿಲ್ ಸಂಖ್ಯೆ-36 (ದಿನಾಂಕ ನಮೂದಿಲ್ಲ) ಮೊತ್ತ ರೂ.16,100/- ಮಾತ್ರ ಇದೆ. ಬಿಲ್ಲನ್ನು ಯಾರಿಗೆ ನೀಡಿದೆಯೆಂದು ಬಿಲ್ಲಿನಲ್ಲಿ ನಮೂದಿಸಿಲ್ಲ;

xix. ಕ್ರಮ ಸಂಖ್ಯೆ-19 – ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಲ್ಲಿರುವ ನಿರುಪಯುಕ್ತ ಕೊಳವೆ ಬಾವಿಗಳಿಗೆ ವೆಲ್ಡ್ ಮಾಡಿ ಮುಚ್ಚಿರುವ ಬಾಬ್ತು ಕೆ.ವಿಜಯಕುಮಾರ್ ರವರಿಗೆ ಎಂದು ನಗದು ವಹಿಯಲ್ಲಿ ನಮೂದಾಗಿದ್ದು, ಅವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಇಲ್ಲ. ಶ್ರೀ ಹನಿ ಇಂಜಿನಿಯರಿಂಗ್ ವರ್ಕ್ಸ್‌ನ ದಿ:08/08/14ರ ಬಿಲ್ (ಸಂಖ್ಯೆ ನಮೂದಿಲ್ಲ) ಇದೆ;

xx. ಕ್ರಮ ಸಂಖ್ಯೆ-20 – ಹುತ್ತೂರು, ಗುಟ್ಲೂರು, ವಿಟ್ಟಪ್ಪನಹಳ್ಳಿ, ನೆರ‍್ನಹಳ್ಳಿ, ತಂಬಿಹಳ್ಳಿ, ಹೊಳಲಿ ಮತ್ತು ಹೊಸೂರು ಗ್ರಾಮಗಳ ಪಂಪ್ ಮತ್ತು ಮೋಟಾರ್ ದುರಸ್ತಿಗಾಗಿ ಎಸ್.ಎಸ್.ಪಂಪ್ಸ್ & ಮೋಟಾರ್ಸ್, ಟಮಕ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ನಮೂದಾಗಿದ್ದು, ಸದರಿ ಮೊತ್ತಕ್ಕೆ ಆ ಸಂಸ್ಥೆಯ ಹೆಸರಿನಲ್ಲಿ ಬಿಲ್ ಮತ್ತು ವೋಚರ್ ಇಲ್ಲ. ಆದರೆ, ಎಸ್.ಎಸ್.ಪಂಪ್ಸ್ & ಮೋಟಾರ್ಸ್‌ನ ಬಿಲ್ ಸಂಖ್ಯೆ:198 ದಿ:02/08/14 ರೂ.11,750/-, ಬಿಲ್ ಸಂಖ್ಯೆ:199 ದಿ:16/09/14 ರೂ.11,450/-, ಬಿಲ್ ಸಂಖ್ಯೆ:307 ದಿ:19/09/14 ರೂ.11,955/-, ಬಿಲ್ ಸಂಖ್ಯೆ:308 ದಿ:19/09/14 ರೂ.11,288/- ಇದೆ;

xxi. ಕ್ರಮ ಸಂಖ್ಯೆ-21 – ರಿಷಬ್ ಮೆಟಲ್ಸ್ & ಪೈಪ್ಸ್‌ನ ದಿ:03/09/14ರ ಇನ್‌ವಾಯ್ಸ್ ಸಂಖ್ಯೆ:302 ಮೊತ್ತ ರೂ.28,380/- ಇದೆ;

xxii. ಕ್ರಮ ಸಂಖ್ಯೆ-22 ಮತ್ತು 33 – ಗುಟ್ಲೂರು ಗ್ರಾಮದ ಪ್ಯಾನೆಲ್ ಬೋರ್ಡ್ ರಿಪೇರಿ ಹಾಗೂ ಪೈಪ್‌ಲೈನ್ ದುರಸ್ತಿಗಾಗಿ ಎಂದು ನಗದು ವಹಿಯಲ್ಲಿ ಹೇಳಿದೆ. ಕ್ರಮ ಸಂಖ್ಯೆ-22ರ ಚೆಕ್ ಅನ್ನು ಶ್ರೀ.ಅಂಜಪ್ಪ ರವರ ಹೆಸರಿಗೆ ನೀಡಿದ್ದು, ಸದರಿಯವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ. ಕ್ರಮ ಸಂಖ್ಯೆ-33ರ ಮೊತ್ತವನ್ನು ಸೆಲ್ಫ್ ಚೆಕ್ ಮುಖೇನ ಪಡೆದಿದೆ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಬಡ್ಜೆಟಿಂಗ್ ಮತ್ತು ಅಕೌಂಟಿಂಗ್) ನಿಯಮಗಳು 2006ರ ನಿಯಮ 88(3)ರಲ್ಲಿ ಸೆಲ್ಫ್ ಚೆಕ್‌ಗಳಲ್ಲಿ ಗ್ರಾಮ ಪಂಚಾಯತ್ ಹಣವನ್ನು ಪಡೆಯಲು

ಅವಕಾಶವಿದೆ. ಆದರೆ, ಸದರಿ ಕ್ರಮ ಸಂಖ್ಯೆ-33ರ ಖರ್ಚಿನ ಬಾಬ್ತು ಗ್ರಾಮ ಪಂಚಾಯತ್ ಕೂಲಿಯವರನ್ನು ನೇಮಿಸಿಕೊಂಡ ಬಗ್ಗೆ ದಾಖಲೆಗಳು ಇಲ್ಲ. ಸಾಮಗ್ರಿ ಖರೀದಿ ಬಾಬ್ತು ರೂ.590/- ಮತ್ತು ಕೂಲಿ ವೆಚ್ಚ ಬಾಬ್ತು ರೂ.500/- ಒಟ್ಟು ರೂ.1,090/-ಗಳಿಗೆ ದಿ:15/11/14ರ ಕಚ್ಚಾ ಬಿಲ್ಲಿದೆ. ಸದರಿ ಬಿಲ್ ಪಂಚಾಯತ್ ಹೆಸರಿಗಿಲ್ಲ. ಬಿಲ್ಲಿನಲ್ಲಿ ಸಂಸ್ಥೆಯ ಹೆಸರಿಲ್ಲ;

xxiii. ಕ್ರಮ ಸಂಖ್ಯೆ-23 – ಸಿಸ್ಟರ್ನ್ ದುರಸ್ತಿ ಮತ್ತು ನಲ್ಲಿ ಅಳವಡಿಸುವ ಕಾಮಗಾರಿಗೆ ಶ್ರೀ.ವಿ.ಎನ್.ಸುನೀಲ್‌ಬಾಬು, ಗುತ್ತಿಗೆದಾರರಿಗೆ ಎಂದು ನಗದು ವಹಿಯಲ್ಲಿ ನಮೂದಿಸಿದ್ದು, ಸದರಿಯವರಿಗೆ ಆ ಕಾಮಗಾರಿಯನ್ನು ವಹಿಸಿದ ದಾಖಲೆಗಳಿಲ್ಲ. ಸದರಿಯವರ ಹೆಸರಿಗೆ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

xxiv. ಕ್ರಮ ಸಂಖ್ಯೆ-24 – ಹೊಳಲಿ ಗ್ರಾಮದ ಪೈಪ್‌ಲೈನ್ ದುರಸ್ತಿಗೆ ಕುಡಿಯುವ ನೀರಿನ ಸಾಮಗ್ರಿ ಖರೀದಿಗೆಂದು ನಗದು ವಹಿಯಲ್ಲಿ ದಾಖಲಾಗಿದೆ. ಚೆಕ್ ಅನ್ನು ಶ್ರೀ.ಗೋವಿಂದಪ್ಪ ರವರ ಹೆಸರಿಗೆ ನೀಡಿದೆ. ಸದರಿಯವರ ಹೆಸರಿಗೆ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

xxv. ಕ್ರಮ ಸಂಖ್ಯೆ-25 – ಗುಟ್ಲೂರು ಗ್ರಾಮದ ಪೈಪ್‌ಲೈನ್ ದುರಸ್ತಿಗಾಗಿ ಎಂದು ನಗದು ವಹಿಯಲ್ಲಿ ಹೇಳಿದೆ. ಚೆಕ್ ಅನ್ನು ವೆಂಕಟಮುನಿಯಪ್ಪ ರವರ ಹೆಸರಿಗೆ ನೀಡಿದೆ. ಸದರಿಯವರ ಹೆಸರಿಗೆ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

xxvi. ಕ್ರಮ ಸಂಖ್ಯೆ-26 ಮತ್ತು 31 – ರಾಮಸಂದ್ರ ಗ್ರಾಮದಲ್ಲಿ ಚರಂಡಿಗಳ ಹೂಳು ತೆಗೆಯುವುದು ಮತ್ತು ರಸ್ತೆಯಲ್ಲಿ ಮಣ್ಣು ಹೊಡೆದು ಹಳ್ಳ ಮುಚ್ಚಿರುವ ಬಾಬ್ತು ಶ್ರೀ.ಆರ್.ಎಂ.ಪ್ರತಾಪ್ ರವರಿಗೆ ಎಂದು ನಗದು ವಹಿಯಲ್ಲಿ ದಾಖಲಾಗಿದೆ. ಚೆಕ್ ಅನ್ನು ಆರ್.ಎಂ.ಪ್ರತಾಪ್ ರವರ ಹೆಸರಿಗೆ ನೀಡಿದೆ. ಸದರಿ ಕಾಮಗಾರಿಯನ್ನು ಶ್ರೀ.ಆರ್.ಎಂ.ಪ್ರತಾಪ್, 3ನೇ ದರ್ಜೆ ಗುತ್ತಿಗೆದಾರರಿಗೆ ರೂ.38,465/-ಗಳಿಗೆ ತುಂಡು ಗುತ್ತಿಗೆಯಲ್ಲಿ ವಹಿಸಿರುವ ಕರಾರು ಪತ್ರದ ಪ್ರತಿಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ, ಪೂರ್ಣಗೊಳಿಸಿದ ದಿನಾಂಕ ಮತ್ತು ಪ್ರಗತಿಯ ವಿವರ ಕಾಲಂಗಳು ಭರ್ತಿ ಮಾಡದೇ, ಖಾಲಿ ಬಿಟ್ಟಿರುವುದು ಕಂಡು ಬಂದಿದೆ. ಸದರಿ ಕರಾರು ಪತ್ರವನ್ನು 1 ಮತ್ತು 2ನೇ ಎದುರುದಾರರು ಗುತ್ತಿಗೆದಾರರಿಗೆ ನೀಡಿದ್ದಾರೆ;

xxvii. ಕ್ರಮ ಸಂಖ್ಯೆ-27 – ಪಂಪ್, ಮೋಟಾರ್‌ಗಳನ್ನು ಎತ್ತಿ ಇಳಿಸಿದ ಬಾಬ್ತು ದೇವರಾಜ ಬೋರ್‌ವೆಲ್ ಲಿಫ್ಟಿಂಗ್ ವರ್ಕ್ಸ್ ರವರಿಗೆಂದು ನಗದು ವಹಿಯಲ್ಲಿ ನಮೂದಿಸಿದೆ. ಚೆಕ್ ಅನ್ನು ದೇವರಾಜ್ ಬೋರ್‌ವೆಲ್ ವರ್ಕ್ಸ್ ರವರ ಹೆಸರಿಗೆ ನೀಡಿದೆ. ಆದರೆ, ಸದರಿ ಸಂಸ್ಥೆಯ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

xxviii. ಕ್ರಮ ಸಂಖ್ಯೆ-28 – ವಿಟ್ಟಪ್ಪನಹಳ್ಳಿ ಗ್ರಾಮದಲ್ಲಿ ಪಂಪ್, ಮೋಟಾರ್‌ಗಳನ್ನು ಎತ್ತಿ ಇಳಿಸಿದ ಬಾಬ್ತು ಮಾರುತಿ ಲಿಫ್ಟಿಂಗ್ ವರ್ಕ್ಸ್ ರವರಿಗೆಂದು ನಗದು ವಹಿಯಲ್ಲಿ ನಮೂದಿಸಿದೆ. ಶ್ರೀ ಮಾರುತಿ ಲಿಫ್ಟಿಂಗ್ ವರ್ಕ್ಸ್‌ನ ನಗದು ರಸೀದಿ ಸಂಖ್ಯೆ:1 ಮತ್ತು 2 ಕ್ರಮವಾಗಿ, ರೂ.4,240/- ಮತ್ತು ರೂ.1,600/- ಇದ್ದು, ಸದರಿ ರಸೀದಿಗಳಲ್ಲಿ ದಿನಾಂಕ ನಮೂದಾಗಿಲ್ಲ ಮತ್ತು ಸದರಿ ರಸೀದಿಗಳು ಪಂಚಾಯತ್ ಹೆಸರಿನಲ್ಲಿ ಇಲ್ಲ. ಎರಡೂ ಬಿಲ್ಲುಗಳಿಗೆ ಸೇರಿ ಒಂದೇ ಚೆಕನ್ನು ನೀಡಿದೆ;

xxix. ಕ್ರಮ ಸಂಖ್ಯೆ-29 – ಮೇಡಿ ತಂಬಿಹಳ್ಳಿ ಗ್ರಾಮದ ಪೈಪ್‌ಲೈನ್ ದುರಸ್ತಿಗಾಗಿ ಎಂದು ನಗದು ವಹಿಯಲ್ಲಿ ನಮೂದಿಸಿದೆ. ಚೆಕ್ ಅನ್ನು ಅಮರಾವತಿ ಎಂಬುವವರ ಹೆಸರಿಗೆ ನೀಡಿದ್ದು, ಆದರೆ, ಸದರಿಯವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

xxx. ಕ್ರಮ ಸಂಖ್ಯೆ-30 – ಪಂಪ್, ಮೋಟಾರ್‌ಗಳನ್ನು ಎತ್ತಿ ಇಳಿಸಿದ ಬಾಬ್ತು ಶ್ರೀ.ಮಂಜುನಾಥ ಛತ್ರಕೋಡಿ ರವರಿಗೆಂದು ನಗದು ವಹಿಯಲ್ಲಿ ನಮೂದಿಸಿದೆ. ಆದರೆ, ಸದರಿಯವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

xxxi. ಕ್ರಮ ಸಂಖ್ಯೆ-32 – ಬೆಳಗಾನಹಳ್ಳಿ ಗ್ರಾಮದ ಮೋಟಾರ್ ಬೇರಿಂಗ್, ವೈಂಡಿಂಗ್ ದುರಸ್ತಿ ಇತ್ಯಾದಿ ಎಂದು ನಗದು ವಹಿಯಲ್ಲಿ ನಮೂದಿಸಿದೆ. ಚೆಕ್ ಅನ್ನು ಶ್ರೀ.ವೆಂಕಟರಾಮಪ್ಪ ರವರ ಹೆಸರಿನಲ್ಲಿ ನೀಡಿದ್ದು, ಅವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ. ಅಮೃತ ರಿಲೇ ಇಂಜಿನಿಯರಿಂಗ್ ವರ್ಕ್ಸ್‌ನ ಕ್ಯಾಷ್ \ ಕ್ರೆಡಿಟ್ ಬಿಲ್ ಸಂಖ್ಯೆ-36 (ದಿನಾಂಕ ನಮೂದಿಲ್ಲ) ಮೊತ್ತ ರೂ.16,100/- ಮಾತ್ರ ಇದೆ. ಬಿಲ್ಲನ್ನು ಯಾರಿಗೆ ನೀಡಿದೆಯೆಂದು ಬಿಲ್ಲಿನಲ್ಲಿ ನಮೂದಿಸಿಲ್ಲ;

xxxii. ಕ್ರಮ ಸಂಖ್ಯೆ-34 – ಕಟೌಟ್, ಕಾಪರ್ ವೈರ್ ಮತ್ತಿತರೆ ಸಾಮಗ್ರಿಗಳ ಖರೀದಿಗೆ ರಿಷಬ್ ಮೆಟಲ್ಸ್, ಕೋಲಾರ ರವರಿಗೆಂದು ನಗದು ವಹಿಯಲ್ಲಿ ನಮೂದಿಸಿದೆ. ಸದರಿ ಸಂಸ್ಥೆಯ ಹೆಸರಿನಲ್ಲಿ ಸದರಿ ಮೊತ್ತಕ್ಕೆ ದಿ:29/12/14ರ ಇನ್‌ವಾಯ್ಸ್ ಸಂಖ್ಯೆ:541 ಇದೆ. ಸದರಿ ಬಿಲ್ ಪಂಚಾಯತ್ ಹೆಸರಿಗಿದೆ;

xxxiii. ಕ್ರಮ ಸಂಖ್ಯೆ-35 – ತಂಬಿಹಳ್ಳಿ ಗ್ರಾಮದಲ್ಲಿ ಪೈಪ್‌ಲೈನ್‌ಗಾಗಿ ಜೆಸಿಬಿ ಬಾಡಿಗೆ ಹಾಗೂ ಕೂಲಿ ಬಾಬ್ತು ಶ್ರೀ.ರೆಡ್ಡಪ್ಪ ರವರಿಗೆ ಎಂದು ನಗದು ವಹಿಯಲ್ಲಿ ನಮೂದಿಸಿದ್ದು, ಜೆಸಿಬಿ ನೋಂದಣಿ ಸಂಖ್ಯೆ ಮತ್ತು ಸದರಿ ಜೆಸಿಬಿ ಮಾಲೀಕತ್ವದ ದಾಖಲೆ ಇಲ್ಲ. ಸದರಿಯವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

xxxiv. ಕ್ರಮ ಸಂಖ್ಯೆ-36 – ಹೊಳಲಿ ಹೊಸೂರು ಗ್ರಾಮದ ಪೈಪ್‌ಲೈನ್ ದುರಸ್ತಿಗೆ ಹಾಗೂ ಕುಡಿಯುವ ನೀರಿನ ಸಾಮಗ್ರಿ ಖರೀದಿಗೆಂದು ನಗದು ವಹಿಯಲ್ಲಿ ದಾಖಲಾಗಿದೆ. ಚೆಕ್

ಅನ್ನು ಶ್ರೀ.ಮುನಿನಾರಾಯಣ ರವರ ಹೆಸರಿಗೆ ನೀಡಿದೆ. ಸದರಿಯವರ ಹೆಸರಿಗೆ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

xxxv. ಕ್ರಮ ಸಂಖ್ಯೆ–37 – ವಿಟ್ಟಪ್ಪನಹಳ್ಳಿ, ನೆರನಹಳ್ಳಿ ಮತ್ತು ತಂಬಿಹಳ್ಳಿ ಗ್ರಾಮಗಳ ಕೆರೆ ಒತ್ತುವರಿ ತೆರವಿಗೆ ಎಂದು ನಗದು ವಹಿಯಲ್ಲಿ ನಮೂದಿಸಿದ್ದು, ಚೆಕನ್ನು ಶ್ರೀ.ವಿ.ಎನ್.ಸುನೀಲ್‌ಬಾಬು ರವರ ಹೆಸರಿಗೆ ನೀಡಿದೆ. ಸದರಿ ಕಾಮಗಾರಿಯನ್ನು ಶ್ರೀ.ವಿ.ಎನ್.ಸುನೀಲ್‌ಬಾಬು ರವರಿಗೆ ವಹಿಸಿದ ದಾಖಲೆಗಳಿಲ್ಲ;

xxxvi. ಕ್ರಮ ಸಂಖ್ಯೆ–38 – ವಿಟ್ಟಪ್ಪನಹಳ್ಳಿ, ನೆರ್ನಹಳ್ಳಿ, ಯಾನಾದಹಳ್ಳಿ, ತಂಬಿಹಳ್ಳಿ, ರಾಮಸಂದ್ರ ಮತ್ತು ಹುತ್ತೂರು ಗ್ರಾಮಗಳಿಗೆ ಪಂಪ್ ಮತ್ತು ಮೋಟಾರ್ ಖರೀದಿಗಾಗಿ ಎಸ್.ಎಸ್.ಪಂಪ್ಸ್ & ಮೋಟಾರ್ಸ್ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ನಮೂದಾಗಿದ್ದು, ಸದರಿ ಮೊತ್ತಕ್ಕೆ ಆ ಸಂಸ್ಥೆಯ ಹೆಸರಿನಲ್ಲಿ ಬಿಲ್ ಮತ್ತು ವೋಚರ್ ಇರುವುದಿಲ್ಲ ಹಾಗೂ ಸದರಿ ಖರೀದಿ ಬಾಬ್ತು ದರಪಟ್ಟಿಯನ್ನು ಕರೆದ ದಾಖಲೆಗಳಿಲ್ಲ;

xxxvii. ಕ್ರಮ ಸಂಖ್ಯೆ–39 – ಬೆಳಗಾನಹಳ್ಳಿ, ವಿಟ್ಟಪ್ಪನಹಳ್ಳಿ, ರಸ್ತೆ ತಂಬಿಹಳ್ಳಿ ಮತ್ತು ರಾಮಸಂದ್ರ ಗ್ರಾಮಗಳಿಗೆ ನೀರು ಸರಬರಾಜು ಮಾಡಲು ಸಾಮಗ್ರಿಗಳ ಖರೀದಿಸಿದ ಬಾಬ್ತು ರಿಷಬ್ ಮೆಟಲ್ಸ್ & ಪೈಪ್ಸ್, ಕೋಲಾರ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ನಮೂದಾಗಿದ್ದು, ಸದರಿ ಮೊತ್ತಕ್ಕೆ ಆ ಸಂಸ್ಥೆಯ ಹೆಸರಿನಲ್ಲಿ ಬಿಲ್ ಮತ್ತು ವೋಚರ್ ಇರುವುದಿಲ್ಲ ಹಾಗೂ ಸದರಿ ಖರೀದಿ ಬಾಬ್ತು ದರಪಟ್ಟಿಯನ್ನು ಕರೆದ ದಾಖಲೆಗಳಿಲ್ಲ;

xxxviii. ಕ್ರಮ ಸಂಖ್ಯೆ–40 – ಯಾನಾದಹಳ್ಳಿ, ಹೊಳಲಿ ಹೊಸೂರು, ಹುತ್ತೂರು, ವಿಟ್ಟಪ್ಪನಹಳ್ಳಿ, ತಂಬಿಹಳ್ಳಿ, ರಾಮಸಂದ್ರ, ಮೇಡಿ ತಂಬಿಹಳ್ಳಿ ಮತ್ತು ನೆರನಹಳ್ಳಿ ಗ್ರಾಮಗಳಿಗೆ ಪಂಪ್, ಮೋಟಾರ್‌ಗಳನ್ನು ಎತ್ತಿ ಇಳಿಸಿದ ಬಾಬ್ತು ದೇವರಾಜ ಬೋರ್‌ವೆಲ್ ಲಿಫ್ಟಿಂಗ್ ವರ್ಕ್ಸ್ ರವರಿಗೆಂದು ನಗದು ವಹಿಯಲ್ಲಿ ನಮೂದಿಸಿದೆ. ಚೆಕ್ ಅನ್ನು ದೇವರಾಜ್ ಬೋರ್‌ವೆಲ್ ವರ್ಕ್ಸ್ ರವರ ಹೆಸರಿಗೆ ನೀಡಿದೆ. ಆದರೆ, ಸದರಿ ಸಂಸ್ಥೆಯ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

xxxix. ಕ್ರಮ ಸಂಖ್ಯೆ–41 – ರಿಷಬ್ ಮೆಟಲ್ಸ್ & ಪೈಪ್ಸ್, ಕೋಲಾರ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ನಮೂದಾಗಿದ್ದು, ಸದರಿ ಮೊತ್ತಕ್ಕೆ ಆ ಸಂಸ್ಥೆಯ ಹೆಸರಿನಲ್ಲಿ ಬಿಲ್ ಮತ್ತು ವೋಚರ್ ಇಲ್ಲ ಹಾಗೂ ಸದರಿ ಖರೀದಿ ಬಾಬ್ತು ದರಪಟ್ಟಿಯನ್ನು ಕರೆದ ದಾಖಲೆಗಳಿಲ್ಲ;

xl. ಕ್ರಮ ಸಂಖ್ಯೆ–42 – ಎಸ್.ಎಸ್.ಪಂಪ್ಸ್ & ಮೋಟಾರ್ಸ್ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ನಮೂದಾಗಿದ್ದು, ಸದರಿ ಮೊತ್ತಕ್ಕೆ ಆ ಸಂಸ್ಥೆಯ ಹೆಸರಿನಲ್ಲಿ ಬಿಲ್ ಮತ್ತು ವೋಚರ್ ಇಲ್ಲ;

xli. ಕ್ರಮ ಸಂಖ್ಯೆ–43 ಮತ್ತು 44 – ಸದರಿ ಪಾವತಿಗಳು ಕ್ರಮವಾಗಿ, ಹುತ್ತೂರು ದನಮಂದೆ ಕೆರೆಯಿಂದ ಗುಟ್ಲೂರು ಕೆರೆ ಮತ್ತು ರಸ್ತೆ ತಂಬಿಹಳ್ಳಿ ಪೈಪ್‌ಲೈನ್ ದುರಸ್ತಿ ಯೆಂದು ನಗದು ವಹಿಯಲ್ಲಿ ನಮೂದಾಗಿದ್ದು, ಸದರಿ ಕಾಮಗಾರಿಗಳನ್ನು ಯಾರಿಗೆ ನೀಡಿದ್ದಾರೆಂಬ ಬಗ್ಗೆ ದಾಖಲೆಗಳಿಲ್ಲ. ಚೆಕ್‌ಗಳ ಮೂಲಕ ಉಳಿತಾಯ ಖಾತೆಗೆ ಹಣ ವರ್ಗಾವಣೆಯಾಗಿದೆಯೆಂದು ಕಂಡು ಬಂದಿದೆ. ಸದರಿ ಮೊತ್ತಗಳಿಗೆ ಬಿಲ್ ಮತ್ತು ವೋಚರ್ ಇಲ್ಲ;

xlii. ಕ್ರಮ ಸಂಖ್ಯೆ–45 – ಶ್ರೀ.ಗೋವಿಂದಪ್ಪ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ನಮೂದಾಗಿದ್ದು, ಸದರಿ ಮೊತ್ತಕ್ಕೆ ಆ ಸಂಸ್ಥೆಯ ಹೆಸರಿನಲ್ಲಿ ಬಿಲ್ ಮತ್ತು ವೋಚರ್ ಇಲ್ಲ. ಯಾವ ಕಾಮಗಾರಿಯ ಬಾಬ್ತು ಸದರಿಯವರಿಗೆ ನೀಡಿದೆಯೆಂಬ ವಿವರಗಳು ಲಭ್ಯವಿಲ್ಲ;

xliii. ಕ್ರಮ ಸಂಖ್ಯೆ–46 – ರಾಮಸಂದ್ರ ಗ್ರಾಮದ ಪೈಪ್‌ಲೈನ್ ದುರಸ್ತಿ ಯೆಂದು ನಗದು ವಹಿಯಲ್ಲಿ ನಮೂದಾಗಿದ್ದು, ಸದರಿ ಕಾಮಗಾರಿಯನ್ನು ಯಾರಿಗೆ ನೀಡಿದ್ದಾರೆಂಬ ಬಗ್ಗೆ ದಾಖಲೆಗಳಿಲ್ಲ. ಚೆಕ್ ಮೂಲಕ ಉಳಿತಾಯ ಖಾತೆಗೆ ಹಣ ವರ್ಗಾವಣೆಯಾಗಿದೆಯೆಂದು ಕಂಡು ಬಂದಿದೆ. ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

xliv. ಕ್ರಮ ಸಂಖ್ಯೆ–47 – ಹುತ್ತೂರು ಹೊಸ ಬೋರ್‌ವೆಲ್‌ಗೆ ಸಾಮಗ್ರಿಗಳ ಖರೀದಿಯೆಂದು ನಗದು ವಹಿಯಲ್ಲಿ ನಮೂದಿಸಿದೆ. ಸದರಿ ಸಾಮಗ್ರಿಯನ್ನು ಯಾರಿಂದ, ಯಾವಾಗ ಖರೀದಿಸಿದೆಯೆಂಬ ದಾಖಲೆಗಳಿಲ್ಲ. ಶ್ರೀ.ನಾಗರಾಜಪ್ಪ ರವರ ಹೆಸರಿಗೆ ಚೆಕ್ ನೀಡಿದ್ದು, ಅವರ ಹೆಸರಿನ ಬಿಲ್ ಮತ್ತು ವೋಚರ್ ಇಲ್ಲ;

xlv. ಕ್ರಮ ಸಂಖ್ಯೆ–48 – ಹುತ್ತೂರು ಬೋರ್‌ವೆಲ್‌ಗೆ ಕಟೌಟ್ ಹಾಕುವುದಕ್ಕೆ ಎಂದು ನಗದು ವಹಿಯಲ್ಲಿ ನಮೂದಿಸಿದೆ. ಶ್ರೀರಾಮಪ್ಪ ರವರ ಹೆಸರಿಗೆ ಚೆಕ್ ನೀಡಿದ್ದು, ಅವರ ಹೆಸರಿನ ಬಿಲ್ ಮತ್ತು ವೋಚರ್ ಇಲ್ಲ. ಸದರಿ ಕಾಮಗಾರಿಯನ್ನು ಅವರಿಗೆ ವಹಿಸಿದ ದಾಖಲೆಗಳಿಲ್ಲ;

xlvi. ಕ್ರಮ ಸಂಖ್ಯೆ–49 – ಹೊಳಲಿ ಹೊಸೂರು ಬೋರ್‌ವೆಲ್ ಹತ್ತಿರ ಕಟೌಟ್ ಹಾಕಿರುವ ಬಾಬ್ತು ಎಂದು ನಗದು ವಹಿಯಲ್ಲಿ ನಮೂದಿಸಿದೆ. ಶ್ರೀ.ರಾಜು.ಎಂ ರವರ ಹೆಸರಿಗೆ ಚೆಕ್ ನೀಡಿದ್ದು, ಅವರ ಹೆಸರಿನ ಬಿಲ್ ಮತ್ತು ವೋಚರ್ ಇಲ್ಲ. ಸದರಿ ಕಾಮಗಾರಿಯನ್ನು ಅವರಿಗೆ ವಹಿಸಿದ ದಾಖಲೆಗಳಿಲ್ಲ;

xlvii. ಕ್ರಮ ಸಂಖ್ಯೆ–50 – ಶ್ರೀ.ಗೋವಿಂದೇಗೌಡ, ಎಲೆಕ್ಟ್ರಿಷಿಯನ್ ಎಂದು ನಗದು ವಹಿಯಲ್ಲಿ ನಮೂದಿಸಿದೆ. ಚೆಕ್ ಮೂಲಕ ಉಳಿತಾಯ ಖಾತೆಗೆ ಹಣ

ವರ್ಗಾವಣೆಯಾಗಿದೆಯೆಂದು ಕಂಡು ಬಂದಿದೆ. ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ. ಸದರಿ ಕಾಮಗಾರಿಯನ್ನು ಅವರಿಗೆ ವಹಿಸಿದ ದಾಖಲೆಗಳಿಲ್ಲ;

xlviii. ಕ್ರಮ ಸಂಖ್ಯೆ–51 – ಹೊಳಲಿ ಹೊಸ ಬೋರ್‌ಗೆ ಕಟೌಟ್ ಹಾಕಿರುವ ಬಾಬ್ತು ಎಂದು ನಗದು ವಹಿಯಲ್ಲಿ ನಮೂದಿಸಿದೆ. ಚೆಕ್ ಮೂಲಕ ಉಳಿತಾಯ ಖಾತೆಗೆ ಹಣ ವರ್ಗಾವಣೆಯಾಗಿದೆಯೆಂದು ಕಂಡು ಬಂದಿದೆ. ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ;

6. ಮೇಲಿನ ಉಪಖಂಡಿಕೆಗಳಲ್ಲಿ ಹೇಳಿದ ಬಿಲ್ \ ರಸೀದಿಗಳನ್ನು ಹೊರತುಪಡಿಸಿ, ಇನ್ನೂ ಕೆಲವೊಂದು ದಾಖಲೆ \ ಬಿಲ್ \ ರಸೀದಿಗಳು ಇವೆ –

1) ಚೌಡೇಶ್ವರಿ ಇಂಜಿನಿಯರಿಂಗ್ ವರ್ಕ್ಸ್‌ನ ದಿನಾಂಕ ನಮೂದಿರದ ಬಿಲ್ ಸಂಖ್ಯೆ–53, ಮೊತ್ತ ರೂ.4,100/–, ಸದರಿ ಬಿಲ್ಲನ್ನು ಯಾರ ಹೆಸರಿಗೆ ನೀಡಿದೆಯೆಂದು ನಮೂದಿಲ್ಲ;

2) ಜಯಲಕ್ಷ್ಮಿ ಸ್ಟೋರ್ಸ್‌ನ ದಿನಾಂಕ ನಮೂದಿರದ ಬಿಲ್ ಸಂಖ್ಯೆ–6734, ಮೊತ್ತ ರೂ.2,980/–;

3) ಜಯಲಕ್ಷ್ಮಿ ಸ್ಟೋರ್ಸ್‌ನ ದಿನಾಂಕ:24/05/14ರ ಬಿಲ್ ಸಂಖ್ಯೆ–6733, ಮೊತ್ತ ರೂ.5,650/–. ಸದರಿ ಬಿಲ್ಲಿನ ಮೇಲೆ ದಿ:12/06/14ರ ಚೆಕ್ ಸಂಖ್ಯೆ:1522 ಮೊತ್ತ ರೂ.18,630/– ಎಂದು ನಮೂದಿಸಿದ್ದು, ಸದರಿ ಚೆಕ್ ಅನ್ನು ಮೇಲಿನ ಉಪ ಖಂಡಿಕೆ–5(iii)ರಲ್ಲಿ ಹೇಳಿದ ಸಾಮಗ್ರಿ ಬಾಬ್ತು ನೀಡಿರುವುದು ಕಂಡು ಬಂದಿದೆ;

4) ದಿನಾಂಕ:14/01/14 ಎಂದು ನಮೂದಿಸಿ ಔಖಆಇಖ ಈಔಖಒ ಎಂಬ ಸಾಮಗ್ರಿಗಳ ಪಟ್ಟಿ. ಅದರ ಬಾಬ್ತು ಹಣವನ್ನು ಪಾವತಿಸಿದೆಯೆಂದು ಪೇಡ್ & ಕ್ಯಾನ್ಸಲ್ಡ್ ಮೊಹರು ಹಾಕಿದೆ;

5) ದಿನಾಂಕ ನಮೂದಿರದ ಔಖಆಇಖ ಈಔಖಒ ಎಂಬ ಸಾಮಗ್ರಿಗಳ ಪಟ್ಟಿ. ಅದರ ಬಾಬ್ತು ರೂ.1,954/– ಹಣವನ್ನು ಪಾವತಿಸಿದೆಯೆಂದು ಪೇಡ್ & ಕ್ಯಾನ್ಸಲ್ಡ್ ಮೊಹರು ಹಾಕಿದೆ;

6) ರಾಯಲ್ ಹಾರ್ಡ್‌ವೇರ್ ಸೆಂಟರ್‌ನ ದಿನಾಂಕ ನಮೂದಿರದ ಇನ್‌ವಾಯ್ಸ್ ಸಂಖ್ಯೆ:80 ಮೊತ್ತ ರೂ.11,072/– ಅದರ ಬಾಬ್ತು ಹಣವನ್ನು ಪಾವತಿಸಿರುವುದು ಪೇಡ್ & ಕ್ಯಾನ್ಸಲ್ಡ್ ಮೊಹರು ಹಾಕಿದೆ. ಸದರಿ ಮೊತ್ತವನ್ನು ಯಾವುದರ ಬಾಬ್ತು ಪಾವತಿಸಿದೆಯೆಂಬ ದಾಖಲೆಗಳಿಲ್ಲ;

7) ಶ್ರೀ ವೆಂಕಟೇಶ್ವರ ಹಾರ್ಡ್‌ವೇರ್‌ನ ಕ್ಯಾಷ್ \ ಕ್ರೆಡಿಟ್ ಬಿಲ್ ಸಂಖ್ಯೆ–4 ದಿ:30/04/14 ಮೊತ್ತ ರೂ.585/–, ಬಿಲ್ ಸಂಖ್ಯೆ:01 ದಿ:15/05/14 ಮೊತ್ತ ರೂ.2,074/–, ಬಿಲ್ ಸಂಖ್ಯೆ:02 ದಿ:25/05/14 ಮೊತ್ತ ರೂ.5,432/–, ಬಿಲ್ ಸಂಖ್ಯೆ:03 ದಿ:28/05/14 ಮೊತ್ತ ರೂ.3,148/–, ಬಿಲ್ ಸಂಖ್ಯೆ:05, 06 ದಿ:15/03/14 ಮೊತ್ತ ರೂ.6,093/–,

ರೂ.3,406/- ಮತ್ತು ಬಿಲ್ ಸಂಖ್ಯೆ:10 ದಿ:17-07-14 ಮೊತ್ತ ರೂ.10,659/-. ಸದರಿ ಬಿಲ್ಲುಗಳಲ್ಲಿ ಹೊಳಲಿ ಹೊಸೂರು, ಗುಟ್ಲೂರು, ಹುತ್ತೂರು, ನೆರನಹಳ್ಳಿ ಎಂದು ಬರೆದಿದೆ. ಪಂಚಾಯತ್ ಹೆಸರಿಗೆ ಸದರಿ ಬಿಲ್ಲುಗಳಿಲ್ಲ. ಬಿಲ್ ಸಂಖ್ಯೆ-5ರ ಮೇಲೆ ದಿ:12/06/14ರ ಚೆಕ್ ಸಂಖ್ಯೆ:001528 ಮೊತ್ತ ರೂ.8,280/- ಎಂದು ನಮೂದಿಸಿದ್ದು, ಸದರಿ ಚೆಕ್ ಅನ್ನು ಮೇಲಿನ ಉಪ ಖಂಡಿಕೆ-5(ix)ರಲ್ಲಿ ಹೇಳಿದ ಸಾಮಗ್ರಿ ಬಾಬ್ತು ನೀಡಿರುವುದು ಕಂಡು ಬಂದಿದೆ;

8) ರಾಯಲ್ ಟ್ರೇಡರ್ಸ್‌ನ ದಿನಾಂಕ:18/07/14ರ ಇನ್‌ವಾಯ್ಸ್ ಸಂಖ್ಯೆ:5682 ಮೊತ್ತ ರೂ.2,638/- ಅದರ ಬಾಬ್ತು ಹಣವನ್ನು ಪಾವತಿಸಿದೆಯೆಂದು ಪೇಡ್ & ಕ್ಯಾನ್ಸಲ್ಡ್ ಮೊಹರು ಹಾಕಿದೆ. ಸದರಿ ಮೊತ್ತವನ್ನು ಯಾವುದರ ಬಾಬ್ತು ಪಾವತಿಸಿದೆಯೆಂಬ ದಾಖಲೆಗಳಿಲ್ಲ. ಸದರಿ ಬಿಲ್ ಪಂಚಾಯತ್ ಹೆಸರಿನಲ್ಲಿ ಇಲ್ಲ;

9) ದೇವರಾಜ ಬೋರ್‌ವೆಲ್ ಲಿಫ್ಟಿಂಗ್ ವರ್ಕ್ಸ್‌ನ ದಿನಾಂಕ:04/10/14ರ ಕ್ರೆಡಿಟ್ ಬಿಲ್ ಸಂ:315 ಮೊತ್ತ ರೂ.2,400/-, ದಿ:06/10/14ರ ಬಿಲ್ ಸಂ:316 ಮೊತ್ತ ರೂ.1,600/-, ದಿ:24/10/14ರ ಬಿಲ್ ಸಂ:317 ಮೊತ್ತ ರೂ.2,800/-, ದಿ:25/10/14ರ ಬಿಲ್ ಸಂ:318 ಮೊತ್ತ ರೂ.2,480/-, ದಿ:29/10/14ರ ಬಿಲ್ ಸಂ:319 ಮೊತ್ತ ರೂ.4,160/-, ದಿ:25/07/14ರ ಬಿಲ್ ಸಂ:303 ಮತ್ತು 304 ಕ್ರಮವಾಗಿ, ಮೊತ್ತ ರೂ.2,800/- ಮತ್ತು ರೂ.1,600/-, ದಿ:26/07/14ರ ಬಿಲ್ ಸಂ:305 ಮೊತ್ತ ರೂ.3,760/-, ದಿ:28/07/14ರ ಬಿಲ್ ಸಂ:306 ಮೊತ್ತ ರೂ.800/- ದಿ:29/07/14ರ ಬಿಲ್ ಸಂ:307 ಮೊತ್ತ ರೂ.1,600/-, ದಿ:30/07/14ರ ಬಿಲ್ ಸಂ:308 ಮೊತ್ತ ರೂ.3,200/-, ದಿ:31/07/14ರ ಬಿಲ್ ಸಂ:309 ಮೊತ್ತ ರೂ.2,800/-, ದಿ:02/08/14ರ ಬಿಲ್ ಸಂ:310 ಮೊತ್ತ ರೂ.2,400/-, ದಿ:03/08/14ರ ಬಿಲ್ ಸಂ:311 ಮೊತ್ತ ರೂ.3,840/-, ದಿ:13/09/14ರ ಬಿಲ್ ಸಂ:312 ಮೊತ್ತ ರೂ.3,760/-, ದಿ:18/09/14ರ ಬಿಲ್ ಸಂ:313 ಮೊತ್ತ ರೂ.3,840/- ಮತ್ತು ದಿ:25/09/14ರ ಬಿಲ್ ಸಂ:314 ಮೊತ್ತ ರೂ.2,720/- ಅದರ ಬಾಬ್ತು ಹಣವನ್ನು ಪಾವತಿಸಿದೆಯೆಂದು ಪೇಡ್ & ಕ್ಯಾನ್ಸಲ್ಡ್ ಮೊಹರು ಹಾಕಿದೆ. ಚೆಕ್‌ನ ನಂಬರ್ ಮತ್ತು ದಿನಾಂಕ ನಮೂದಿಸಿಲ್ಲ. ಸದರಿ ಮೊತ್ತವನ್ನು ಯಾವುದರ ಬಾಬ್ತು ಪಾವತಿಸಿದೆಯೆಂಬ ದಾಖಲೆಗಳಿಲ್ಲ. ಸದರಿ ಬಿಲ್ ಪಂಚಾಯತ್ ಹೆಸರಿನಲ್ಲಿ ಇಲ್ಲ;

10) ಶ್ರೀ ಚೌಡೇಶ್ವರಿ ಅರ್ಥ್ ಮೂವರ್ಸ್‌ನ ಡೈಲಿ ಸ್ಟೇಟ್‌ಮೆಂಟ್ ಕ್ರಮ ಸಂಖ್ಯೆ:709 ದಿ:21/12/14 ಮೊತ್ತ ರೂ.2,500/-; ಸದರಿ ಮೊತ್ತವನ್ನು ಯಾವುದರ ಬಾಬ್ತು ಪಾವತಿಸಿದೆಯೆಂಬ ದಾಖಲೆಗಳಿಲ್ಲ. ಸದರಿ ಬಿಲ್ ಪಂಚಾಯತ್ ಹೆಸರಿನಲ್ಲಿ ಇಲ್ಲ;

11) ನಾಗರಾಜ ಟ್ರೇಡರ್ಸ್‌ನ ದಿನಾಂಕ ನಮೂದಿರದ ಇನ್‌ವಾಯ್ಸ್ ಸಂಖ್ಯೆ:4919 ಮೊತ್ತ ರೂ.2,000/- ಅದರ ಬಾಬ್ತು ಹಣವನ್ನು ಪಾವತಿಸಿದೆಯೆಂದು ಪೇಡ್ & ಕ್ಯಾನ್ಸಲ್ಡ್

ಮೊಹರು ಹಾಕಿದೆ. ಸದರಿ ಮೊತ್ತವನ್ನು ಯಾವುದರ ಬಾಬ್ತು ಪಾವತಿಸಿದೆಯೆಂಬ ದಾಖಲೆಗಳಿಲ್ಲ. ಸದರಿ ಬಿಲ್ ಪಂಚಾಯತ್ ಹೆಸರಿನಲ್ಲಿ ಇಲ್ಲ;

12) ಹೊಳಲಿ ಹೊಸೂರು ಗ್ರಾಮಸ್ಥರು ಹುತ್ತೂರು ಗ್ರಾಮ ಪಂಚಾಯತ್‌ನ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ದಿನಾಂಕ:18/07/14 ರಂದು ನೀಡಿದ್ದಾರೆಂದು ಹೇಳಲಾದ ಅರ್ಜಿ;

13) ಶ್ರೀ.ನಾಗರಾಜ ಎಂಬುವವರು ತಮ್ಮ ಬಾಬ್ತು ಕೆಎ07-7728ರಲ್ಲಿ ಕೋಲಾರ ದಿಂದ ತಂಬಿಹಳ್ಳಿಗೆ ಪಿವಿಸಿ ಪೈಪುಗಳನ್ನು ಸರಬರಾಜು ಮಾಡಿರುವ ಬಾಡಿಗೆ ಬಾಬ್ತು ರೂ.300/-ಗಳನ್ನು ಪಡೆದ ಬಗ್ಗೆ ನೀಡಿರುವ ದಿನಾಂಕ:31/12/14ರ ಸ್ವೀಕೃತಿ;

14) ಶ್ರೀ ಚೌಡೇಶ್ವರಿ ಏಜೆನ್ಸೀಸ್‌ನ ಬಿಲ್ ಸಂಖ್ಯೆ:153 ದಿ:10/10/14 ಮೊತ್ತ ರೂ.960/- ಅದರ ಬಾಬ್ತು ಹಣವನ್ನು ಪಾವತಿಸಿದೆಯೆಂದು ಪೇಡ್ & ಕ್ಯಾನ್ಸಲ್ಡ್ ಮೊಹರು ಹಾಕಿದೆ. ಚೆಕ್‌ನ ನಂಬರ್ ಮತ್ತು ದಿನಾಂಕ ನಮೂದಿಸಿಲ್ಲ. ಸದರಿ ಮೊತ್ತವನ್ನು ಯಾವುದರ ಬಾಬ್ತು ಪಾವತಿಸಿದೆಯೆಂಬ ದಾಖಲೆಯಿಲ್ಲ;

15) ಮಾರುತಿ ಮೋಟಾರ್ ರಿವೈಂಡಿಂಗ್ & ಇಂಜಿನಿಯರಿಂಗ್ ವರ್ಕ್ಸ್‌ನ ಬಿಲ್ ಸಂಖ್ಯೆ:116 ದಿ:18/07/14 ಮೊತ್ತ ರೂ.1,600/- ಅದರ ಬಾಬ್ತು ಹಣವನ್ನು ಪಾವತಿಸಿದೆಯೆಂದು ಪೇಡ್ & ಕ್ಯಾನ್ಸಲ್ಡ್ ಮೊಹರು ಹಾಕಿದೆ. ಚೆಕ್‌ನ ನಂಬರ್ ಮತ್ತು ದಿನಾಂಕ ನಮೂದಿಸಿಲ್ಲ. ಸದರಿ ಮೊತ್ತವನ್ನು ಯಾವುದರ ಬಾಬ್ತು ಪಾವತಿಸಿದೆಯೆಂಬ ದಾಖಲೆಯಿಲ್ಲ;

16) ನಾಗೇಶ್ ಇಂಜಿನಿಯರಿಂಗ್ ವರ್ಕ್ಸ್‌ನ ಬಿಲ್ ಸಂಖ್ಯೆ:73 ದಿ:29/05/14 ಮೊತ್ತ '10,850/-, ಬಿಲ್ ಸಂಖ್ಯೆ:74 ದಿ:10/06/14 ಮೊತ್ತ ರೂ.3,200/-, ಬಿಲ್ ಸಂಖ್ಯೆ:82 ದಿ:07/07/14 ಮೊತ್ತ ರೂ.430/-. ಸದರಿ ಬಿಲ್‌ಗಳು ಪಂಚಾಯತ್ ಹೆಸರಿನಲ್ಲಿ ಇಲ್ಲ. ಅದರ ಬಾಬ್ತು ಹಣವನ್ನು ಪಾವತಿಸಿದೆಯೆಂದು ಪೇಡ್ & ಕ್ಯಾನ್ಸಲ್ಡ್ ಮೊಹರು ಹಾಕಿದೆ. ಚೆಕ್‌ನ ನಂಬರ್ ಮತ್ತು ದಿನಾಂಕ ನಮೂದಿಸಿಲ್ಲ. ಸದರಿ ಮೊತ್ತವನ್ನು ಯಾವುದರ ಬಾಬ್ತು ಪಾವತಿಸಿದೆಯೆಂಬ ದಾಖಲೆಗಳಿಲ್ಲ;

17) ಶ್ರೀ ಚೌಡೇಶ್ವರಿ ರಿವೈಂಡಿಂಗ್ & ಇಂಜಿನಿಯರಿಂಗ್ ವರ್ಕ್ಸ್‌ನ ಸಂಖ್ಯೆ ನಮೂದಿರದ ಬಿಲ್ ದಿನಾಂಕ:18/02/14 ಮೊತ್ತ ರೂ.5,900/-, ಅದರ ಬಾಬ್ತು ಹಣವನ್ನು ಪಾವತಿಸಿದೆಯೆಂದು ಪೇಡ್ & ಕ್ಯಾನ್ಸಲ್ಡ್ ಮೊಹರು ಹಾಕಿದೆ. ಚೆಕ್‌ನ ನಂಬರ್ ಮತ್ತು ದಿನಾಂಕ ನಮೂದಿಸಿಲ್ಲ. ಸದರಿ ಮೊತ್ತವನ್ನು ಯಾವುದರ ಬಾಬ್ತು ಪಾವತಿಸಿದೆಯೆಂಬ ದಾಖಲೆಗಳಿಲ್ಲ;

7. ಮೇಲಿನ ಉಪ ಖಂಡಿಕೆ-4 ರಿಂದ 6ರ ಖರ್ಚುಗಳಿಗೆ ಸಂಬಂಧಿಸಿದಂತೆ ಆಹ್ವಾನಿಸಿದ ದರ ಪಟ್ಟಿ ಲಭ್ಯವಿಲ್ಲ. ಕೆಎಫ್‌ಸಿ ಪರಿಚ್ಛೇದ 17ರ ಪ್ರಕಾರ ಅಗತ್ಯವಿರುವ ಸರಕು ಸಾಮಗ್ರಿಗಳನ್ನು

ಮಾರುಕಟ್ಟೆಯಲ್ಲಿ ಖರೀದಿಸುವ ಸಾಧಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55(49)(ಎ)ರನ್ವಯ ರೂ.5,000/- ಮೀರಿದ ರೂ.1,00,000/-ದವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೊಟೇಷನ್ ಕರೆಯುವ ಮೂಲಕ ಮಾಡತಕ್ಕದ್ದು;

8. ಮುಂದುವರೆದು, ಮೇಲಿನ ಖಂಡಿಕೆ-5ರಲ್ಲಿನ ಖರ್ಚುಗಳಿಗೆ ಸಂಬಂಧಿಸಿದ ವೋಚರ್ ಮತ್ತು ರಸೀದಿಗಳಿಲ್ಲ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 2006ರ ನಿಯಮ 43ರನ್ವಯ ಪ್ರತಿ ಖರ್ಚಿಗೆ ಸಂಬಂಧಿಸಿದಂತೆ ಬಿಲ್ ಅಥವಾ ವೋಚರ್‌ಗಳು ಇರಬೇಕೆನ್ನುವುದು ಕಡ್ಡಾಯವಾಗಿದೆ. ಸದರಿ ಚೆಕ್‌ಗಳನ್ನು ಆಯಾಯ ವ್ಯಕ್ತಿ \ ಸಂಸ್ಥೆ ಹೆಸರಿಗೆ ನೀಡಿದ ಬಗ್ಗೆ ಸ್ವೀಕೃತಿಯನ್ನು ಪಡೆದ ಬಗ್ಗೆ ದಾಖಲೆಯಿಲ್ಲ. ಕಾರಣ, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 2006ರ ನಿಯಮಗಳು ಮತ್ತು ಕರ್ನಾಟಕ ಆರ್ಥಿಕ ಸಂಹಿತೆ ನಿಯಮಗಳು ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

9. ಹಿಂದೆ ಹೇಳಿದ ಖಂಡಿಕೆಗಳಲ್ಲಿನ ಕಾರಣಗಳಿಗಾಗಿ ಅಂದಾಜು ಒಟ್ಟು ರೂ.10,43,690.00 ಮೊತ್ತವು ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ;

10. ಸದರಿ ಖರ್ಚುಗಳ ಅವಧಿಯಲ್ಲಿ 1ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಮತ್ತು 2ನೇ ಎದುರುದಾರರು ದಿ:06/07/2015ರವರೆಗೆ ಹಾಗೂ 3ನೇ ಎದುರುದಾರರು ದಿ:07/07/15 ರಿಂದ 09/09/15ರವರೆಗೆ ಹುತ್ತೂರು ಗ್ರಾಮ ಪಂಚಾಯತ್‌ನ ಅಧ್ಯಕ್ಷರುಗಳಾಗಿ ಕರ್ತವ್ಯ ನಿರ್ವಹಿಸಿರುವುದು ಕಂಡು ಬಂದಿದೆ. ಮೇಲೆ ಹೇಳಿದ ದುರುಪಯೋಗವಾದ ಮೊತ್ತಕ್ಕೆ 1ನೇ ಎದುರುದಾರರು ಸಂಪೂರ್ಣವಾಗಿ ಜವಾಬ್ದಾರರಾಗಿದ್ದಾರೆ. ಸದರಿ ದುರುಪಯೋಗ ಮೊತ್ತದ ಪೈಕಿ, 2 ಮತ್ತು 3ನೇ ಎದುರುದಾರರುಗಳು ತಮ್ಮ ಕಾರ್ಯಾವಧಿಯಲ್ಲಿ ಕ್ರಮವಾಗಿ, ರೂ.8,84,340/- ಮತ್ತು ರೂ.1,59,350/-ಗಳ ದುರುಪಯೋಗದ ಮೊತ್ತಕ್ಕೆ ಜವಾಬ್ದಾರರಾಗಿದ್ದಾರೆ. ಕಾರಣ, 1 ರಿಂದ 3ನೇ ಎದುರುದಾರರುಗಳ ಕರ್ತವ್ಯ ಲೋಪ \ ದುರ್ನಡತೆ ಮೇಲ್ನೋಟಕ್ಕೆ ಸಾಬೀತಾಗಿದೆ.

12) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ರಿಂದ 3ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

13) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 3ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ

ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

14) ಎರಡು (2) ಮತ್ತು 3ನೇ ಎದುರುದಾರರುಗಳು ಹುತ್ತೂರು ಗ್ರಾಮ ಪಂಚಾಯತ್‌ನ ಅಧ್ಯಕ್ಷರುಗಳಾಗಿದ್ದು, ಸದರಿಯವರಿಂದ ದುರುಪಯೋಗದ ಮೊತ್ತವನ್ನು ವಸೂಲಿ ಮಾಡಲು ಹಾಗೂ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಸೂಕ್ತ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಿದೆ.

15) ಅದಲ್ಲದೆ, 1ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 1ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

16) ದೂರುದಾರರು ಸಲ್ಲಿಸಿದ ದೂರು, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ ಆ.ಸ.ನೌ.ರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠತೆಯನ್ನು ತೋರಿಸದೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾದ್ದರಿಂದ ಆ.ಸ.ನೌ.ರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಕ್ರಮ ಜರುಗಿಸಬಹುದಾಗಿದೆ ಎಂದು ಕಂಡುಬಂದಿರುತ್ತದೆ.

17) ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ ಆ.ಸ.ನೌ.ರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)(i) ರಿಂದ (iii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೂ ಸದರಿಯವರು ಈಗಾಗಲೇ ನಿವೃತ್ತರಾಗಿದ್ದ ಪಕ್ಷದಲ್ಲಿ ಕೆ.ಸಿ.ಎಸ್.ಅರ್. ನಿಯಮ 214(2)(ಬಿ) ಅಡಿಯಲ್ಲಿ ಅನುಮತಿ ನೀಡಿ ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರಡಿಯಲ್ಲಿ ಆ.ಸ.ನೌಕರರ ವಿರುದ್ಧ

ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ, ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ, ಶಿಸ್ತು ನಡವಳಿಕೆಯನ್ನು ಆಪಾದಿತ ಸರ್ಕಾರಿ ನೌಕರರ ವಿರುದ್ಧ 14-ಎ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ-1ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು ವಿಚಾರಣೆಗಳು-14 ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. ಆದ್ದರಿಂದ, ನಿಮ್ಮ ವಿರುದ್ಧ ಈ ಆಪಾದನೆ.

18) ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 10-12-2020 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

19) ಆ.ಸ.ನೌರವರು ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

20) ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ ತಾನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯೆಂದು ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಗ್ರಾಮ ಪಂಚಾಯಿತಿಯ ಆಡಳಿತ ಮಂಡಳಿಯವರು ಸೂಚಿಸಿ ಅನುಮೋದಿಸಿದಂತೆ, ಸರ್ಕಾರದ ಮಾರ್ಗಸೂಚಿಗಳಂತೆ ಕ್ರಿಯಾ ಯೋಜನೆಯನ್ನು ತಯಾರಿಸಿ, ಮೇಲಾಧಿಕಾರಿಗಳಿಂದ ಮಂಜೂರಾತಿ ಹಾಗೂ ಅನುಮೋದನೆ ಪಡೆದು, ಅನುಷ್ಠಾನಗೊಳಿಸಲಾಗಿರುತ್ತದೆ ಅಂತ ಹೇಳಿರುತ್ತಾರೆ. ಕ್ರಿಯಾ ಯೋಜನೆಯಲ್ಲಿ ಮೂಲಭೂತ ಸೌಕರ್ಯಗಳ ಅನುಷ್ಠಾನಕ್ಕಾಗಿ, 1) ನೀರು ಸರಬರಾಜಿನ ಘಟಕಗಳ ನಿರ್ವಹಣೆ, 2) ನೀರು ಸರಬರಾಜಿನ ಪೈಪ್‌ಲೈನ್, 3) ಮೋಟಾರ್ ಮತ್ತು ಪಂಪ್‌ಗಳ ರಿಪೇರಿ, 4) 13ನೇ ಹಣಕಾಸಿನ ಕ್ರಿಯಾ ಯೋಜನೆಯ ಅನುಮೋದಿತ ಕಾಮಗಾರಿಗಳ ನಿರ್ವಹಣೆ, 5) ನರೇಗಾ ಯೋಜನೆಯ ಕಾಮಗಾರಿಗಳ

ಅನುಷ್ಠಾನ, 6) ಗ್ರಾಮ ಪಂಚಾಯಿತಿ ಖಾತೆ ಒಂದರ ಸಾದಿಲ್ವಾರು ವೆಚ್ಚಗಳು, 7) ಬೀದಿ ದೀಪಗಳ ನಿರ್ವಹಣೆ ಮತ್ತು ವೈಯಕ್ತಿಯ ಫಲಾನುಭವಿಗಳ ಶೌಚಾಲಯ, 8) ಪರಿಶಿಷ್ಠ ಜಾತಿಮತ್ತು ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ಕಲ್ಯಾಣ, 9) ವಸತಿ ಯೋಜನೆಗಳ ಕಾರ್ಯಕ್ರಮಗಳು ನಿಯಮಾನುಸಾರ ಅನುಷ್ಠಾನಗೊಂಡಿರುತ್ತದೆ ಅಂತ ಹೇಳಿರುತ್ತಾರೆ.

21) ಮುಂದುವರಿದು, ಪಾರದರ್ಶಕ ಕಾಯ್ದೆ 1999-2000 ನಿಯಮ 3 ರಲ್ಲಿ ನೀರು ಸರಬರಾಜಿಗೆ ಸಂಬಂಧಪಟ್ಟ ವೆಚ್ಚಗಳ ಬಗ್ಗೆ ಸಾಮಗ್ರಿ ಖರೀದಿ/ಸೇವೆಗಳು ಎಂಬ ಬಾಬ್ತಿನಂತೆ ಗ್ರಾಮ ಪಂಚಾಯಿತಿಗೆ 2.00 ಲಕ್ಷದ ಮಿತಿಗೆ ಒಳಪಟ್ಟು ವಿನಾಯಿತಿ ನೀಡಲಾಗಿದೆ ಅಂತ ಹೇಳಿರುತ್ತಾರೆ. ಮುಂದುವರಿದು, 13ನೇ ಹಣಕಾಸು ಯೋಜನೆಯಲ್ಲಿ ಭೌತಿಕ ಮತ್ತು ಆರ್ಥಿಕ ಗುರಿಯಂತೆ ಗ್ರಾಮ ಪಂಚಾಯಿತಿ ಸಭೆಯಲ್ಲಿ ಠರಾವಿನಲ್ಲಿ ಅನುಮೋದಿಸಿದಮತೆ ಕ್ರಿಯಾ ಯೋಜನೆಯನ್ನು ತಯಾರಿಸಿ, ಮೇಲಾಧಿಕಾರಿಗಳಿಂದ ಅನುಮೋದನೆ ಪಡೆದು, ಇದೇ ಯೋಜನೆಯ ಮಾರ್ಗಸೂಚಿಯಂತೆ ಅನುದಾನವನ್ನು ಕಾರ್ಯಕ್ರಮಗಳ ಅನುಷ್ಠಾನದ ಮೇರೆಗೆ ಸರಬರಾಜುದಾರರಿಗೂ ಹಾಗೂ ಸೇವಾದಾರರಿಗೆ ಅವರಿಂದ ಪಡೆದ ಬಿಲ್ಲುಗಳು ಹಾಗೂ ವೋಚರ್‌ಗಳ ಮೇರೆಗೆ ಅನುಮೋದನೆ ಪಡೆದು, ಅನುದಾನವನ್ನು ಬ್ಯಾಂಕ್‌ಗಳ ಮೂಲಕ ವರ್ಗಾವಣೆ ಹಾಗು ಚೆಕ್‌ಗಳ ಮೂಲಕ ವಿತರಿಸಲಾಗಿದೆ. ದೋಷಾರೋಪಣೆ ಪಟ್ಟಿಯಲ್ಲಿ ಕೋಲಾರ ತಾಲ್ಲೂಕು ಹುತ್ತೂರು ಗ್ರಾಮ ಪಂಚಾಯಿತಿ ಬ್ಯಾಂಕ್ ಖಾತೆ ಪಾಸ್ ಬುಕ್ ಕಂಡುಬಂದಿರುವ ಬಿಡುಗಡೆಯಾದ ಅನುದಾನದಲ್ಲಿ 7,31,402/- ರೂ. ಗಳಿಗೆ ವೋಚರ್ ಕೊಟ್ಟಿರುತ್ತಾರೆ. ಉಳಿಕೆ 5,91,729/- ರೂ. ಗಳಿಗೆ ವೋಚರ್ ನೀಡಿರುವುದಿಲ್ಲವೆಂದು ದೂರುದಾರರು ಪ್ರತ್ಯುತ್ತರದಲ್ಲಿ ಪುಟ ಸಂಖ್ಯೆ 3 ಮತ್ತು 4 ರಲ್ಲಿ ಇವರ ವಿರುದ್ಧ ನಮೂದಿಸಿರುವ ಆರೋಪಗಳು ನ್ಯಾಯಸಮ್ಮತವಲ್ಲವೆಂದು ಹೇಳಿರುತ್ತಾರೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಸಾಮಗ್ರಿಗಳ ಖರೀದಿಯಲ್ಲಿ ಮಾರ್ಕೆಟ್ ದರಕ್ಕಿಂತ ದುಪ್ಪಟ್ಟು ದರದಲ್ಲಿ ಸಾಮಗ್ರಿಗಳನ್ನು ಖರೀದಿಸಿ, ವಂಚನೆ ಮಾಡಿರುತ್ತಾರೆ ಅಂತ ಆರೋಪಿಸಿದ ಬಗ್ಗೆ, ದೂರುದಾರರು ಸಾಮಗ್ರಿಗಳ ಖರೀದಿಗಳ ಬಗ್ಗೆ ನಿಗದಿಪಡಿಸಿರುವ ದರದ ಪಟ್ಟಿಯೊಂದಿಗೆ ಪರಿಶೀಲಿಸಿ, ದುಪ್ಪಟ್ಟು ಹಣ ವೆಚ್ಚ ಮಾಡಿರುವುದಕ್ಕೆ ಯಾವುದೇ

ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ ಹಾಗೂ ಯಾವ ಮಾಲೀಕರಿಂದ ಕಮೀಷನ್ ಪಡೆದಿರುವ ಬಗ್ಗೆ ದೂರುದಾರರು ಯಾವುದೇ ದಾಖಲಾತಿಗಳನ್ನು ಸಲ್ಲಿಸದೇ, ನೇರವಾಗಿ ಆರೋಪಿಸಿರುವುದು ಸರಿಯಿಲ್ಲ ಅಂತ ಹೇಳಿರುತ್ತಾರೆ. ಆದ್ದರಿಂದ, ತಾನು ಯಾವುದೇ ಕರ್ತವ್ಯ ಲೋಪವೆಸಗಿರುವುದಿಲ್ಲವೆಂದು ಹೇಳಿರುತ್ತಾರೆ.

22) ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ಶ್ರೀ ವಿ. ರಾಮಕೃಷ್ಣ, ಬಿನ್ ಲೇಟ್ ಆಂಜನೇಯಲು ಇವರನ್ನು ಪಿ.ಡಬ್ಲ್ಯು–1 ಎಂದು ಹಾಗೂ ಒಟ್ಟು ನಿ.ಪಿ.–1 ರಿಂದ ನಿ.ಪಿ.–6 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ. ರವರು ತಮ್ಮನ್ನು ಡಿ.ಡಬ್ಲ್ಯೂ.–1 ಎಂದು ಸಾಕ್ಷ್ಯ ನುಡಿದಿದ್ದು, ತಮ್ಮ ಪರವಾಗಿ ನಿ.ಡಿ.–1 ರಿಂದ ನಿ.ಡಿ.–5 ರವರೆಗಿನ ದಾಖಲಾತಿಯನ್ನು ಗುರುತುಪಡಿಸಿಕೊಂಡಿರುತ್ತಾರೆ.

23) ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

24) ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1 :** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

25) ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

26) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಭಾಗಶ: ಸಕಾರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

27) ದೂರುದಾರರಾದ ಶ್ರೀ ವಿ.ರಾಮಕೃಷ್ಣ, ಬಿನ್ ಲೇಟ್ ಆಂಜನೇಯಲು ಇವರು ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ ಹುತ್ತೂರು ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ 13ನೇ ಹಣಕಾಸು ಯೋಜನೆಯಲ್ಲಿ ದಿ.12-06-2014 ರಿಂದ 09-09-2015 ರವರೆಗೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದ್ದು ಮತ್ತು ಇಷ್ಟು ಹಣ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ ಎಂಬ ಬಗ್ಗೆ ಕ್ರಿಯಾ ಯೋಜನೆ ಮತ್ತು ಬ್ಯಾಂಕ್ ಪಾಸ್‌ಬುಕ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ಮಾಹಿತಿ ಹಕ್ಕು ಅಧಿನಿಯಮದಲ್ಲಿ ಕೋರಿದ್ದು, ಅದಕ್ಕೆ ಆ.ಸ.ನೌ. ರವರು ಕೇವಲ ಬ್ಯಾಂಕ್ ಪಾಸ್‌ಬುಕ್ಕನ್ನು ನೀಡಿದ್ದು, ಅದನ್ನು ಪರಿಶೀಲಿಸಿದಾಗ 13,23,131/- ರೂ. ಹಣ ಬಂದಿರುತ್ತದೆ ಅಂತ ಕಂಡುಬಂದಿರುತ್ತದೆ. ಮೇಲೆ ಹೇಳಿದ ದಾಖಲಾತಿಗಳನ್ನು ಹಾಜರು ಪಡಿಸಲು ಕೇಳಿದಾಗಲೂ ಸಹ, ಹಾಜರು ಪಡಿಸದ ಕಾರಣ, ಆ.ಸ.ನೌ. ರು ಗ್ರಾಮ ಪಂಚಾಯಿತಿಗೆ ಮಂಜೂರಾದ ಹಣವನ್ನು ಅಭಿವೃದ್ಧಿ ಕೆಲಸಗಳಿಗೆ ಬಳಸದೇ, ದುರುಪಯೋಗ ಪಡಿಸಿಕೊಂಡಿರುತ್ತಾರೆ ಅಂತ ದೂರಿನಲ್ಲಿ ಹೇಳಿರುತ್ತಾರೆ.

28) ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ, ದೂರುದಾರರನ್ನು ಪಿ.ಡಬ್ಲ್ಯು-1 ಎಂದು ಸಾಕ್ಷಿ ಮಾಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದೂರಿನಲ್ಲಿ 13ನೇ ಹಣಕಾಸಿನ ಯೋಜನೆಯಡಿಯಲ್ಲಿ ಬಂದ ಹಣಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಸಲ್ಲಿಸಲು ಕೇಳಿದಾಗಲೂ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಬ್ಯಾಂಕ್ ಪಾಸ್‌ಬುಕ್ಕಿನಲ್ಲಿ ತೋರಿಸಿದ ಹಣವನ್ನು ಪೂರ್ತಿ ಖರ್ಚಾಗಿದ್ದು, ಖರ್ಚು ಮಾಡಿದ ಹಣಕ್ಕೆ ಯಾವುದೇ ವೋಚರ್‌ಗಳನ್ನು ಕೊಟ್ಟಿರುವುದಿಲ್ಲ. ಆದ್ದರಿಂದ, ತಾನು ನಿ.ಪಿ.1 ರಂತೆ ದೂರನ್ನು ಸಲ್ಲಿಸಿರುತ್ತೇನೆ ಅಂತ ನುಡಿದಿರುತ್ತಾರೆ. ಫಾರಂ ನಂ. 1 ಮತ್ತು 2 ನ್ನು ಸಲ್ಲಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.2 ಮತ್ತು 3 ಎಂದು ಗುರುತಿಸಲಾಗಿದೆ. ಪಾಸ್‌ಬುಕ್ಕಿನ ಜೆರಾಕ್ಸ್ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿ.ಪಿ. 4 ಎಂದು ಗುರುತಿಸಲಾಗಿದೆ. ಮುಂದುವರಿದು, ಈ ಸಂಸ್ಥೆಯಿಂದ ಪ್ರತ್ಯುತ್ತರವನ್ನು ಸಲ್ಲಿಸಲು ಸೂಚಿಸಿದ್ದು, ಅದರ ಜೊತೆಗೆ ಆ.ಸ.ನೌ. ರವರು ಸಲ್ಲಿಸಿದ ಆಕ್ಷೇಪಣೆ ಮತ್ತು ವೋಚರ್‌ಗಳನ್ನು ಕಳುಹಿಸಿಕೊಡಲಾಗಿತ್ತು.

ಸದರಿ ವೋಚರ್‌ಗಳನ್ನು ಪರಿಶೀಲಿಸಿ, ನಿ.ಪಿ.5 ರಂತೆ ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಅದರಲ್ಲಿ 7,31,402/- ಗಳ ವೋಚರ್ ಬಂದಿರುತ್ತದೆ. ಉಳಿದ ಹಣ 5,91,721/- ರೂ. ಗಳಿಗೆ ವೋಚರ್‌ಗಳು ಬಂದಿರುವುದಿಲ್ಲ ಅಂತ ಹೇಳಿರುತ್ತಾರೆ. ಮುಂದುವರಿದು, ವೋಚರ್‌ಗಳನ್ನು ಪರಿಶೀಲಿಸಲಾಗಿ, ಕೆಲವೊಂದು ವೋಚರ್‌ಗಳಲ್ಲಿ ದಿನಾಂಕ ನಮೂದು ಇರುವುದಿಲ್ಲ ಮತ್ತು ಗ್ರಾಮ ಪಂಚಾಯಿತಿಯ ಹೆಸರು ಇರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ವೋಚರ್‌ಗಳನ್ನು ನಿ.ಪಿ.6 ರಂತೆ ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ.ರವರು ತಮ್ಮನ್ನು ಡಿ.ಡಬ್ಲ್ಯು-1 ಎಂದು ತಮ್ಮ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ತಮ್ಮ ರಕ್ಷಣಾ ಹೇಳಿಕೆಯಲ್ಲಿ ಹೇಳಿದ ವಿಷಯವನ್ನೇ ಹೇಳಿದ್ದು, ನಿ.ಡಿ.1 ರಿಂದ ನಿ.ಡಿ.5 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

29) ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಕೇವಲ ವೋಚರ್‌ಗಳನ್ನು ಹಾಜರುಪಡಿಸಿದ್ದು, ಅನುಬಂಧ-2 ರಲ್ಲಿ ಪ್ಯಾರಾ ನಂ. 9 ರಲ್ಲಿ ಹೇಳಿದ ವಿಷಯಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದೇ ರೀತಿ ಪ್ಯಾರಾ ನಂ. 9 ರಲ್ಲಿ, 4, 5 ಹಾಗೂ 6 ರಲ್ಲಿ ಹೇಳಿದ ವಿಷಯಗಳ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆ.ಸ.ನೌ. ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪ್ಯಾರಾ ನಂ. 4 ಮತ್ತು 5 ರಲ್ಲಿ ಹೇಳಿದ ವಿಷಯಗಳ ಬಗ್ಗೆ ಮುಖ್ಯ ಯೋಜನಾಧಿಕಾರಿಗಳು (ಪ್ರ) ಜಿಲ್ಲಾ ಪಂಚಾಯತ್, ಕೋಲಾರ ಇವರು 2014-15 ನೇ ಸಾಲಿನ 13ನೇ ಹಣಕಾಸಿನ ಯೋಜನೆಯಡಿ ಹಣ ದುರುಪಯೋಗ ಆಗಿರುತ್ತದೆ ಅಥವಾ ಇಲ್ಲವೇ ಎನ್ನುವ ಬಗ್ಗೆ ತನಿಖೆ ಮಾಡಿ ವರದಿಯನ್ನು ಸಲ್ಲಿಸಲು ಸೂಚಿಸಿದ್ದು, ಆ ರೀತಿ ಇವರು ತನಿಖೆಯನ್ನು ಮಾಡಿ, ದಿನಾಂಕ 04-12-2021 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೋಲಾರ ಇವರಿಗೆ ಸಲ್ಲಿಸಿರುತ್ತಾರೆ. ಅದನ್ನು ನಿ.ಡಿ.2 ಎಂದು ಗುರುತಿಸಲಾಗಿದೆ. ಇವರು ತಮ್ಮ ವರದಿಯಲ್ಲಿ ದೋಷಾರೋಪಣೆಯಲ್ಲಿದ್ದ ಅನುಬಂಧ-2 ರಲ್ಲಿ ಪ್ಯಾರಾ ನಂ. 5 ರಲ್ಲಿ ಕ್ರಮ ಸಂಖ್ಯೆ: 1 ರಿಂದ 48 ಗಳಿಗೆ ಸಂಬಂಧಿಸಿದಂತೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೋಲಾರ ಇವರು ವರದಿಯಲ್ಲಿ

ಯಥಾವತ್ತಾಗಿ ಹೇಳಿರುತ್ತಾರೆ. ಅದರಲ್ಲಿ ಕ್ರಮ ಸಂಖ್ಯೆ: 10, 18, 23, 41 ನ್ನು ಹೊರತುಪಡಿಸಿ, ಉಳಿದ ವಿಷಯಗಳ ಬಗ್ಗೆ ಪಾವತಿ ಮಾಡಿದ್ದು ಕಂಡುಬಂದಿರುತ್ತದೆ ಅಂತ ಹೇಳಿರುತ್ತಾರೆ.

30) ಕ್ರಮ ಸಂಖ್ಯೆ 10 ರಲ್ಲಿ ಶ್ರೀ ಡಿ. ಶಂಕರಪ್ಪ ರವರಿಗೆ ಬಿಡಿ ಸಾಮಗ್ರಿಗಳ ಖರೀದಿಗಾಗಿ ನೀಡಿದೆ ಎಂದು ನಗದು ವಹಿಯಲ್ಲಿ ನಮೂದಿಸಿದೆ. ಆದರೆ ಅವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ಲು ಮತ್ತು ವೋಚರ್ ಇರುವುದಿಲ್ಲ ಎಂದು ಮಾಡಲಾದ ಆಪಾದನೆಗೆ ತನಿಖಾ ವರದಿಯಲ್ಲಿ ಕ್ರಮ ಸಂಖ್ಯೆ 10 ರ ಚೆಕ್ ನಂ. 001529, ದಿನಾಂಕ 13-04-2014 ರೂ. 3,500/- ಪಾವತಿಯ ಕೂಲಿ ಬಾಬ್ತು ಆಗಿದ್ದು, ಇದಕ್ಕೆ ಸಂಬಂಧಿಸಿದಂತೆ ಮಾಸ್ಟರ್ ರೋಲ್ ಲಗತ್ತಿಸಿದ್ದು, ಸದರಿಯವರ ಹೆಸರಿಗೆ ಪಾವತಿಯಾಗಿರುವುದಕ್ಕೆ ಯಾವುದೇ ದಾಖಲೆಗಳು ಇರುವುದಿಲ್ಲವೆಂದು ಹೇಳಿರುತ್ತಾರೆ.

31) ಅದರಂತೆ ಕ್ರಮ ಸಂಖ್ಯೆ: 18 ಬೆಳಗಾನಹಳ್ಳಿ ಗ್ರಾಮದ ಮೋಟಾರ್ ಬೇರಿಂಗ್, ವೈಂಡಿಂಗ್ ದುರಸ್ತಿ ಇತ್ಯಾದಿ ಎಂದು ನಗದು ವಹಿಯಲ್ಲಿ ನಮೂದಿಸಿದೆ. ಚೆಕ್ ಅನ್ನು ಶ್ರೀ.ವೆಂಕಟರಾಮಪ್ಪ ರವರ ಹೆಸರಿನಲ್ಲಿ ನೀಡಿದ್ದು, ಅವರ ಹೆಸರಿನಲ್ಲಿ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ. ಅಮೃತ ರಿಲೇ ಇಂಜಿನಿಯರಿಂಗ್ ವರ್ಕ್ಸ್‌ನ ಕ್ಯಾಷ್ \ ಕ್ರೆಡಿಟ್ ಬಿಲ್ ಸಂಖ್ಯೆ-36 (ದಿನಾಂಕ ನಮೂದಿಲ್ಲ) ಮೊತ್ತ ರೂ.16,100/- ಮಾತ್ರ ಇದೆ. ಬಿಲ್ಲನ್ನು ಯಾರಿಗೆ ನೀಡಿದೆಯೆಂದು ಬಿಲ್ಲಿನಲ್ಲಿ ನಮೂದಿಸಿಲ್ಲ. ಈ ವಿಷಯದ ಬಗ್ಗೆ ತನಿಖಾ ವರದಿಯಲ್ಲಿ ಶ್ರೀ ವಿ. ವೆಂಕಟರಾಮಪ್ಪ, ಗುತ್ತಿಗೆದಾರರ ಹೆಸರಿಗೆ ಪಾವತಿ ಮಾಡಿದ್ದು, ನಲ್ಲಿ ನೀಡಿದ್ದು, ಪೈಪ್‌ಲೈನ್ ಹಾಗೂ ಸಿಸ್ಟರ್ನ್ ಅಳವಡಿಸಿರುವ ಬಾಬ್ತು ಆಗಿದ್ದು, ಸದರಿ ಕಾಮಗಾರಿಗೆ ಸಂಬಂಧಿಸಿದಂತೆ, ಕರಾರು ಪತ್ರ, ಕಚೇರಿ ಆದೇಶ, ಷೆಡ್ಯೂಲ್ ಬಿ ಲಗತ್ತಿಸಿರುತ್ತಾರೆ. ಆದರೆ, ಸದರಿ ಕಾಮಗಾರಿಗೆ ಸಂಬಂಧಿಸಿದಂತೆ, ಕೆ.ಟಿ.ಪಿ.ಪಿ. ನಿಯಮದಂತೆ ಪೂರಕ ದಾಖಲೆಗಳು ಇರುವುದಿಲ್ಲ ಅಂತ ಹೇಳಿರುತ್ತಾರೆ.

32) ಅದರಂತೆ, ಕ್ರಮ ಸಂಖ್ಯೆ-23 - ಸಿಸ್ಟರ್ನ್ ದುರಸ್ತಿ ಮತ್ತು ನಲ್ಲಿ ಅಳವಡಿಸುವ ಕಾಮಗಾರಿಗೆ ಶ್ರೀ.ವಿ.ಎನ್.ಸುನೀಲ್‌ಬಾಬು, ಗುತ್ತಿಗೆದಾರರಿಗೆ ಎಂದು ನಗದು ವಹಿಯಲ್ಲಿ



8

ನಮೂದಿಸಿದ್ದು, ಸದರಿಯವರಿಗೆ ಆ ಕಾಮಗಾರಿಯನ್ನು ವಹಿಸಿದ ದಾಖಲೆಗಳಿಲ್ಲ. ಸದರಿಯವರ ಹೆಸರಿಗೆ ಸದರಿ ಮೊತ್ತಕ್ಕೆ ಬಿಲ್ ಮತ್ತು ವೋಚರ್ ಇಲ್ಲ ಎಂದು ಮಾಡಿದ ಆಪಾದನೆಗೆ ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಗುಟ್ಲೂರು ಗ್ರಾಮದಲ್ಲಿ ಸಿಸ್ಟರ್ನ್ ದುರಸ್ತಿ ಮತ್ತು ನಲ್ಲಿ ಅಳವಡಿಸುವ ಕಾಮಗಾರಿ ಬಿಲ್ಲಿನ ಮೊತ್ತ ಶ್ರೀ ವಿ.ಎನ್. ಸುನೀಲ್‌ಬಾಬು, ಗುತ್ತಿಗೆದಾರರಿಗೆ ಪಾವತಿ ಮಾಡಿರುತ್ತಾರೆ. ಸದರಿ ಪಾವತಿಗೆ ಸಂಬಂಧಿಸಿದಂತೆ, ಕಾಮಗಾರಿ ಕರಾರು ಪತ್ರ, ಷೆಡ್ಯೂಲ್ ಬಿ ಸಲ್ಲಿಸಿರುತ್ತಾರೆ. ಆದರೆ ದಾಖಲೆಗಳು ಪೂರಕವಾಗಿರುವುದಿಲ್ಲ ಎಂದು ಹೇಳಿರುತ್ತಾರೆ.

33) ಅದರಂತೆ, ಕ್ರಮ ಸಂಖ್ಯೆ-43 ಮತ್ತು 44 - ಸದರಿ ಪಾವತಿಗಳು ಕ್ರಮವಾಗಿ, ಹುತ್ತೂರು ದನಮಂದೆ ಕೆರೆಯಿಂದ ಗುಟ್ಲೂರು ಕೆರೆ ಮತ್ತು ರಸ್ತೆ ತಂಬಿಹಳ್ಳಿ ಪೈಪ್‌ಲೈನ್ ದುರಸ್ತಿ ಯೆಂದು ನಗದು ವಹಿಯಲ್ಲಿ ನಮೂದಾಗಿದ್ದು, ಸದರಿ ಕಾಮಗಾರಿಗಳನ್ನು ಯಾರಿಗೆ ನೀಡಿದ್ದಾರೆಂಬ ಬಗ್ಗೆ ದಾಖಲೆಗಳಿಲ್ಲ. ಚೆಕ್‌ಗಳ ಮೂಲಕ ಉಳಿತಾಯ ಖಾತೆಗೆ ಹಣ ವರ್ಗಾವಣೆಯಾಗಿದೆಯೆಂದು ಕಂಡು ಬಂದಿದೆ. ಸದರಿ ಮೊತ್ತಗಳಿಗೆ ಬಿಲ್ ಮತ್ತು ವೋಚರ್ ಇರುವುದಿಲ್ಲ ಎಂದು ಮಾಡಿದ ಆಪಾದನೆಗೆ, ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಕೂಲಿ ಬಾಬ್ತು ಮಮತ, ಮಂಜುನಾಥ, ವನಿತಾ, ರಂಗನಾಥ, ಈರಮ್ಮ ಹಾಗೂ ಪಾರ್ವತಮ್ಮ ರವರ ಹೆಸರಿನಲ್ಲಿ ಮಾಸ್ಟರ್ ರೋಲ್ ಇದ್ದು, ಪಾವತಿಯಾಗಿರುವುದಕ್ಕೆ ದಾಖಲೆಗಳು ಇರುವುದಿಲ್ಲ.

34) ಮುಂದುವರಿದು, ತನಿಖಾ ವರದಿಯಲ್ಲಿ ಕೆ.ಟಿ.ಪಿ.ಪಿ. ನಿಯಮಾನುಸಾರ ಪ್ರಕಟಣೆ, ದರಪಟ್ಟಿ, ತುಲನಾತ್ಮಕ ದರಪಟ್ಟಿ, ಕಾರ್ಯಾದೇಶ, ಪಾವತಿ ಆದೇಶ, ಪಾವತಿ ಮಾಡಿರುವುದಕ್ಕೆ ಚೆಕ್ ನಕಲು ಪ್ರತಿ ಕಡತದಲ್ಲಿ ಲಗತ್ತಿಸಿರುವುದಿಲ್ಲ ಹಾಗೂ ಪರಿಶೀಲನಾ ಸಮಯದಲ್ಲಿ ಸದರಿ ದಾಖಲೆಗಳು ಲಭ್ಯವಿರುವುದಿಲ್ಲ. ಸರಕುಗಳನ್ನು ಸರಬರಾಜು ಪಡೆದಾಗ, ದಾಸ್ತಾನು ವಹಿಯಲ್ಲಿ ನಮೂದಿಸಿರುವುದಿಲ್ಲ. ಪಂಪು, ಮೋಟಾರು ದುರಸ್ತಿಗೆ ಸಂಬಂಧಿಸಿದಂತೆ, ಲಾಗ್ ಪುಸ್ತಕ ನಿರ್ವಹಿಸಿರುವುದಿಲ್ಲ. ಪಾವತಿಯ ಬಿಲ್ಲು ಪಡೆದಿರುವ ಉದ್ದೇಶಕ್ಕೆ ಮಾಡಿರುತ್ತಾರೆ. ಆದರೆ, ಸೂಕ್ತ ಪೂರಕ ದಾಖಲೆಗಳನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದು, ಇದು ಕೆ.ಟಿ.ಪಿ.ಪಿ. ನಿಯಮ ಉಲ್ಲಂಘನೆಯಾಗಿದೆ ಎಂದು ವರದಿಯಲ್ಲಿ ತಿಳಿಸಿರುತ್ತಾರೆ.

35) ಪಿ.ಡಬ್ಲ್ಯು-1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಸಂಸ್ಥೆಯಿಂದ ಆ.ಸ.ನೌ. ರವರ ವತಿಯಿಂದ ಸಲ್ಲಿಸಿದ ವೋಚರ್‌ಗಳನ್ನು ತನಗೆ ಕಳುಹಿಸಿಕೊಟ್ಟಿದ್ದು, ಅವುಗಳನ್ನು ಪರಿಶೀಲಿಸಿ, ಪ್ರತ್ಯುತ್ತರವನ್ನು ಸಲ್ಲಿಸಿರುತ್ತೇನೆ ಅಂತ ಹೇಳಿರುತ್ತಾರೆ. ಸದರಿ ವೋಚರ್‌ಗಳನ್ನು ನಿ.ಪಿ.6 ಎಂದು ಗುರುತಿಸಲಾಗಿದೆ. ಸದರಿ ವೋಚರ್ ಗಳನ್ನು ಪರಿಶೀಲಿಸಲಾಗಿ, ನಾಗರಾಜ ಟ್ರೇಡರ್ಸ್, ಕೋಲಾರ ಇವರಿಂದ ಒಂದು ಟ್ಯಾಕ್ಸ್ ಇನ್‌ವಾಯ್ಸ್ ಅನ್ನು ಹಾಜರು ಪಡಿಸಿದ್ದು, ಅದು 2,000/- ರೂ. ಮೊತ್ತದ್ದಾಗಿದ್ದು, ಇದರಲ್ಲಿ ಗ್ರಾಮ ಪಂಚಾಯಿತಿಯ ಹೆಸರು ಇರುವುದಿಲ್ಲ. ಅದರಂತೆ, ಶ್ರೀ ವೆಂಕಟೇಶ್ವರ ಹಾರ್ಡ್‌ವೇರ್, ತಂಬಳ್ಳಿ ಗೇಟ್, ಕೋಲಾರ ಇದರ ಕ್ಯಾಷ್/ಕ್ರೆಡಿಟ್ ಬಿಲ್ ಇದ್ದು, ಅದರು 10,659/- ರೂ. ಗಳಿದ್ದು, ಇದಕ್ಕೂ ಸಹ ಗ್ರಾಮ ಪಂಚಾಯಿತಿಯ ಹೆಸರು ಇರುವುದಿಲ್ಲ. ಅದರಂತೆ, ಚೌಡೇಶ್ವರಿ ಅರ್ಥ್ ಮೂವರ್, ತಂಬಳ್ಳಿ, ಕೋಲಾರ ಇದರ ಬಗ್ಗೆ ಒಂದು ದಾಖಲೆಯನ್ನು ಹಾಜರು ಪಡಿಸಿದ್ದು, 2500/- ರೂ. ಗಳನ್ನು ಮುಂಗಡವಾಗಿ ಪಡೆದುಕೊಂಡಿದ್ದು ಇರುತ್ತದೆ ಎಂದು ನಮೂದು ಇದ್ದು, ಅದರಲ್ಲಿ ಗ್ರಾಮ ಪಂಚಾಯಿತಿಯ ಹೆಸರು ಇರುವುದಿಲ್ಲ. ಅದರಂತೆ, ಅಮೃತ ರಿಲೇ ಇಂಜಿನೀಯರಿಂಗ್ ವರ್ಕ್ಸ್, ಅಗ್ರಹಾರ ಕ್ರಾಸ್, ಮುಳಬಾಗಿಲು ಇವರು ರೂ. 16,100/- ಮತ್ತು ರೂ.15,450/- ಗಳಿಗೆ ನೀಡಿದ ಕ್ಯಾಷ್/ಕ್ರೆಡಿಟ್ ಬಿಲ್ ಇದ್ದು, ಇದರಲ್ಲಿ ಗ್ರಾಮ ಪಂಚಾಯಿತಿ ಹೆಸರಾಗಲೀ, ದಿನಾಂಕವಾಗಲೀ ಇರುವುದಿಲ್ಲ. ಅದರಂತೆ, ರಾಯಲ್ ಟ್ರೇಡರ್ಸ್, ತಾಲ್ಲೂಕು ಕೋಲಾರ ಇವರು ನೀಡಿದ ರೂ.2,638/- ಗಳ ಟ್ಯಾಕ್ಸ್ ಇನ್‌ವಾಯ್ಸ್ ಇದ್ದು, ಇದರಲ್ಲಿಯೂ ಸಹ ಗ್ರಾಮ ಪಂಚಾಯಿತಿಯ ಹೆಸರು ಇರುವುದಿಲ್ಲ. ಅದರಂತೆ, ಎಸ್.ಆರ್. ಏಜೆನ್ಸೀಸ್ ಅಂಡ್ ಲಿಫ್ಟಿಂಗ್ ವರ್ಕ್ಸ್ ಇವರು ನೀಡಿದ ಹಣ ಸಂದ ರಸೀದಿ ರೂ.2,005/- ಇದ್ದು, ಇದರಲ್ಲಿಯೂ ಸಹ ಗ್ರಾಮ ಪಂಚಾಯಿತಿಯ ಹೆಸರು ಇರುವುದಿಲ್ಲ.

36) ಅದರಂತೆ, ಎಸ್.ಆರ್. ಏಜೆನ್ಸೀಸ್ ಅಂಡ್ ಲಿಫ್ಟಿಂಗ್ ವರ್ಕ್ಸ್ ಇವರು ನೀಡಿದ ಹಣ ಸಂದ ರಸೀದಿ ರೂ. 4,180/- ಇದ್ದು, ಇದರಲ್ಲಿಯೂ ಸಹ ಗ್ರಾಮ ಪಂಚಾಯಿತಿಯ ಹೆಸರು ಇರುವುದಿಲ್ಲ. ಅದೇ ರೀತಿ ವೆಂಕಟೇಶ್ವರ ಹಾರ್ಡ್‌ವೇರ್, ಕೋಲಾರ ಇವರು ರೂ.6,093/-, ರೂ.3,406/- , ರೂ.3,148/-, ರೂ.3,432/-, ರೂ.2,074/-, ರೂ.585/- ಕ್ಯಾಷ್ ಕ್ರೆಡಿಟ್

ಬಿಲ್ ನೀಡಿದ್ದು, ಅವುಗಳಲ್ಲಿ ಗ್ರಾಮ ಪಂಚಾಯಿತಿಯ ಹೆಸರು ಇರುವುದಿಲ್ಲ. ಅದರಂತೆ ರಾಯಲ್ ಹಾರ್ಡ್‌ವೇರ್ ಸೆಂಟರ್, ಕೋಲಾರ ಇವರು ರೂ.11,072/- ಟ್ಯಾಕ್ಸ್ ಇನ್‌ವಾಯ್ಸ್ ಹಾಜರುಪಡಿಸಿದ್ದು, ಅದರಲ್ಲಿ ಯಾವುದೇ ದಿನಾಂಕ ನಮೂದು ಇರುವುದಿಲ್ಲ. ಅದೇ ರೀತಿ ಜಯಲಕ್ಷ್ಮೀ ಟ್ರೇಡರ್ಸ್, ಮುಳಬಾಗಿಲು ಇವರು ರೂ. 2,980/- ಗಳ ಕ್ಯಾಷ್ ಬಿಲ್ಲನ್ನು ಕೊಟ್ಟಿದ್ದು, ಆದರೆ ಇದರಲ್ಲಿ ಯಾವುದೇ ದಿನಾಂಕ ಇರುವುದಿಲ್ಲ. ಅದರಂತೆ, ಚೌಡೇಶ್ವರಿ ಇಂಜಿನಿಯರಿಂಗ್ ವರ್ಕ್ಸ್, ಕೋಲಾರ ಇವರು ರೂ. 4,100/- ಕ್ಯಾಷ್/ಕ್ರೆಡಿಟ್ ಬಿಲ್ ಹಾಜರು ಪಡಿಸಿದ್ದು, ಇದರಲ್ಲಿ ಗ್ರಾಮ ಪಂಚಾಯಿತಿ ಹೆಸರಾಗಲೀ, ದಿನಾಂಕವಾಗಲೀ ನಮೂದು ಇರುವುದಿಲ್ಲ. ಈ ವೋಚರ್‌ಗಳ ಬಗ್ಗೆ ಮೇಲೆ ಹೇಳಿದಂತೆ ನ್ಯೂನತೆಗಳಿದ್ದು, ಅವುಗಳ ಬಗ್ಗೆ ಆ.ಸ.ನೌ. ರವರು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಆದ್ದರಿಂದ, ಈ ಮೇಲೆ ಹೇಳಿದ ವೋಚರ್‌ಗಳ ಪ್ರಕಾರ ಒಟ್ಟು ರೂ.88,732/- ಗಳು ದುರುಪಯೋಗವಾಗಿದೆ ಎಂದು ಕಂಡುಬರುತ್ತದೆ. ನಿ.ಡಿ.2 ರಂತೆ, ತನಿಖಾ ವರದಿಯಲ್ಲಿ ಕೆ.ಟಿ.ಪಿ.ಪಿ. ನಿಯಮಾನುಸಾರ ಪ್ರಕಟಣೆ, ದರಪಟ್ಟಿ, ತುಲನಾತ್ಮಕ ದರಪಟ್ಟಿ, ಕಾರ್ಯಾದೇಶ, ಪಾವತಿ ಆದೇಶ, ಪಾವತಿ ಮಾಡಿರುವುದಕ್ಕೆ ಚೆಕ್ ನಕಲು ಪ್ರತಿ ಕಡತದಲ್ಲಿ ಲಗತ್ತಿಸಿರುವುದಿಲ್ಲ ಹಾಗೂ ಪರಿಶೀಲನಾ ಸಮಯದಲ್ಲಿ ಸದರಿ ದಾಖಲೆಗಳು ಲಭ್ಯವಿರುವುದಿಲ್ಲ. ಸರಕುಗಳನ್ನು ಸರಬರಾಜು ಪಡೆದಾಗ, ದಾಸ್ತಾನು ವಹಿಯಲ್ಲಿ ನಮೂದಿಸಿರುವುದಿಲ್ಲ. ಪಂಪು, ಮೋಟಾರು ದುರಸ್ತಿಗೆ ಸಂಬಂಧಿಸಿದಂತೆ, ಲಾಗ್ ಪುಸ್ತಕ ನಿರ್ವಹಿಸಿರುವುದಿಲ್ಲ. ಪಾವತಿಯ ಬಿಲ್ಲು ಪಡೆದಿರುವ ಉದ್ದೇಶಕ್ಕೆ ಮಾಡಿರುತ್ತಾರೆ. ಆದರೆ, ಸೂಕ್ತ ಪೂರಕ ದಾಖಲೆಗಳನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದು, ಇದು ಕೆ.ಟಿ.ಪಿ.ಪಿ. ನಿಯಮ ಉಲ್ಲಂಘನೆಯಾಗಿದೆ ಎಂದು ವರದಿಯಲ್ಲಿ ತಿಳಿಸಿರುತ್ತಾರೆ. ಆದರೆ ಇಷ್ಟೇ ಹಣ ದುರುಪಯೋಗವಾಗಿರುತ್ತದೆ ಎನ್ನುವ ಬಗ್ಗೆ ಹೇಳಿರುವುದಿಲ್ಲ ಹಾಗೂ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಒಟ್ಟಾರೆ ಎಷ್ಟು ಹಣ ದುರುಪಯೋಗವಾಗಿರುತ್ತದೆ ಅಂತ ನಿಖರವಾಗಿ ಹೇಳಿರುವುದಿಲ್ಲ. ಆದರೆ, ವೋಚರ್‌ಗಳ ಪ್ರಕಾರ ರೂ. 88,732/- ಗಳ ದುರುಪಯೋಗವಾಗಿದೆ ಎಂದು ಕಂಡುಬರುತ್ತದೆ.

37) ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ಭಾಗಶ: ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು, ಅಂಶ–1ನ್ನು **ಭಾಗಶ: ಸಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

38) **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರರಾದ **ಶ್ರೀಮತಿ ಜಿ.ಲಕ್ಷ್ಮೀ,** ಈ ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹುತ್ತೂರು ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಹೊರಿಸಲಾದ ದೋಷಾರೋಪಗಳಿಗೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪ್ಯಾರಾ ನಂ. 36 ರಲ್ಲಿ ಹೇಳಿದ ಹಾಗೆ ಆ.ಸ.ನೌ. ರವರು ಹಣ ದುರುಪಯೋಗ ಮಾಡಿಕೊಂಡಿರುತ್ತಾರೆ ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪೂರಕ ದಾಖಲೆಗಳನ್ನು ನಿರ್ವಹಿಸದೇ ಇದ್ದು ಹಾಗೂ ಕೆ.ಟಿ.ಪಿ.ಪಿ. ನಿಯಮಗಳನ್ನು ಉಲ್ಲಂಘನೆ ಮಾಡಿರುತ್ತಾರೆ ಎನ್ನುವ ಕುರಿತು **ಭಾಗಶ: ಸಫಲವಾಗಿರುತ್ತದೆ** ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌ ರವರ ನಿವೃತ್ತಿ ದಿನಾಂಕ: 30–04–2038 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

Baradesi 23/2/23

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| | |
|---|---|
| **Particulars of Documents** | |
| **Witness examined on behalf of the Disciplinary Authority** | |
| **PW.1** | Sri. V. Ramakrishna, S/o Late Anjaneyalu, Ooduvarapalli, Cheluru Hobli, Bagepalli Taluk, Chikkaballapura Dist. (Original) |
| **Documents marked on behalf of the Disciplinary Authority Ex.P-1 to Ex.P-6** | |
| **Ex.P.1, P.1(a)** | Complaint and Signature of the complainant (Original) |
| **Ex.P.2, P.2(a)** | Form No. I (Complaint) and signature of the complainant (Original) |
| **Ex.P.3, P.3(a)** | Form No. II (Complainant's Affidavit) and signature of the complainant (Original) |
| **Ex.P.4** | Pass Book copy (Xerox) |
| **Ex.P.5, P.5(a)** | Rejoinder of the Complainant and his signature (original) |
| **Ex.P.6** | Bills/Vouchers (Attested copies) |

| Witness examined on behalf of the DGO | |
|---|---|
| **DW.1** | Smt. G. Lakshmi, D/o Gopalakrishna, P.D.O., Huttur Grama Panchayath, Kolar (Original) |
| **Documents marked on behalf of the DGO Ex.D.1 to Ex.D.5** | |
| **Ex D.1** | Letter dated 10-12-2021 of CEO, ZP, Kolar (Attested copy) |
| **Ex.D.2** | Letter dated 04-12-2021 of Chief Planning Officer (I/c), ZP, Kolar and with report (Attested copy) |
| **Ex.D-3** | Letter dated 31-03-2017 of Senior Deputy Director, Local Accounts Audit Circle, Kolar and documents (Attested copy) |
| **Ex.D-4** | Written submission of Smt. Lakshmamma and Kote Narayanaswamy dated 20-07-2021 submitted to the Additional Commissioner, Regional Commissioner Enquiry Authority, Bengaluru Division (Attested copies) |
| **Ex.D-5** | Written submission of Smt. Lakshmamma and Kote Narayanaswamy dated 24-05-2022 submitted to the Additional Commissioner, Regional Commissioner Enquiry Authority, Bengaluru Division (Attested copies) |

Receipt of the above report and original records may kindly be acknowledged.

Baradeshi 23/2/23

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.